# ಜ್ಞಾನ-ಚೇತನ





## 6 ನೇ ತರಗತಿ
## ಕನ್ನಡ ಭಾಷಾ ಪ್ರಶ್ನೋತ್ತರ ಮಾಲಿಕೆ
*(2021–22)*






ರಚನೆ & ಸಂಗ್ರಹ

**ಶ್ರೀ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ ಕನ್ನಡ ಸಾಹಿತ್ಯ ಸಂಘ**

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುಡುದೂರು, ಬಳ್ಳಾರಿ ಜಿಲ್ಲೆ, ಮೊ: 9036653155**














*ಶಾರದಾಂಬೆ, ಭಾರತಾಂಬೆ, ಕನ್ನಡಾಂಬೆ, ಗುಂಜಲಾಂಬೆ & ವಿಜಯಗೌರಾಂಬೆ ಇವರ ಕೃಪೆಯಿಂದ*

**ಶ್ರೀ ಸ್ವಾಮಿ ವಿವೇಕಾನಂದ ಗುರೂಜಿ ಹವ್ಯಾಸಿ ಪ್ರಕಾಶನ, ಗುಡುದೂರು–ಮಾಗಳ**

# ಪ್ರಥಮ ಸೆಮಿಸ್ಟರ್ ಪಠ್ಯಕ್ರಮ

| | ಗದ್ಯಭಾಗ | ಲೇಖಕರು | ಪು.ಸಂ |
|---|---|---|---|
| ೦೧ | ದೊಡ್ಡವರ ದಾರಿ | ಬೆ.ಗೋ. ರಮೇಶ್ | 5–7 |
| ೦೨ | ಗಂಧರ್ವಸೇನ | ಸಮಿತಿ | 7–8 |
| ೦೩ | ಕೃಷ್ಣ–ಸುಧಾಮ | ವಿ.ಎಸ್. ಶಿರಹಟ್ಟಿ ಮಠ | 8–10 |
| ೦೪ | ಡಾ. ರಾಜಕುಮಾರ್ | ದೊಡ್ಡಹುಲ್ಲೂರು ರುಕ್ಕೋಜಿರಾವ್ | 10–12 |
| | **ಪದ್ಯಭಾಗ** | **ಕವಿಗಳು** | |
| ೦೧ | ಬೇಸಿಗೆ | ಬಿ.ಆರ್. ಲಕ್ಷ್ಮಣರಾವ್ | 12–13 |
| ೦೨ | ಮಂಗಳ ಗ್ರಹದಲ್ಲಿ ಪುಟ್ಟಿ | ಸಿ.ಎಂ. ಗೋವಿಂದರೆಡ್ಡಿ | 13–14 |
| ೦೩ | ನೀ ಹೋದ ಮರುದಿನ | ಚೆನ್ನಣ್ಣ ವಾಲೀಕಾರ | 14 |
| ೦೪ | ಮಗು ಮತ್ತು ಹಣ್ಣುಗಳು | ಎಚ್.ಎಸ್. ಶಿವಪ್ರಕಾಶ್ | 14–15 |
| | **ಪೂರಕ ಪಾಠಗಳು** | **ಲೇಖಕರು** | |
| ೦೧ | ನಾಟ್ಯಕಲಾ ದುರಂಧರ ಮಹಮ್ಮದ್ ಪೀರ್ | ಸಮಿತಿ | 15 |
| ೦೨ | ಅವ್ವ | ಲಲಿತಾ. ಕೆ. ಹೊಸಪ್ಯಾಟಿ | 16 |
| | **ವ್ಯಾಕರಣ ಮಾಹಿತಿ** | | |
| ೦೧ | ವರ್ಣಮಾಲೆಗಳು, ಗುಣಿತಾಕ್ಷರಗಳು, ಸಂಯುತ್ತಾಕ್ಷರಗಳು | | ವ್ಯಾಕರಣ ಧಾರೆ ಪುಸ್ತಕದಲ್ಲಿದೆ |
| ೦೨ | ವಚನಗಳು,ಲಿಂಗಗಳು, ವಿಭಕ್ತಿ ಪ್ರತ್ಯಯ ರೂಢನಾಮ,ಅಂಕಿತನಾಮ, ಅನ್ವರ್ಥನಾಮ | | |
| ೦೩ | ನುಡಿಗಟ್ಟು, ಗಾದೆಮಾತು, ಒಗಟು | | |
| ೦೪ | ಪ್ರಾಸಪದಗಳು | | |
| ೦೫ | ದ್ವಿರುಕ್ತ, ಜೋಡುನುಡಿ, ಅನುಕರಣಾವ್ಯಯ | | |
| ೦೬ | ಲೇಖನ ಚಿನ್ಹೆಗಳು | | |

# ದ್ವಿತಿಯ ಸೆಮಿಸ್ಟರ್ ಪಠ್ಯಕ್ರಮ

| 1 | ಗದ್ಯಭಾಗ | ಲೇಖಕರು | ಪು.ಸಂ. |
|---|---|---|---|
| ೦೧ | ಧನ್ಯವಾದ ಹೇಳಿದ ಕೊಕ್ಕರೆ | ಡಾ. ಅನುಪಮಾ ನಿರಂಜನ | 19–20 |
| ೦೨ | ಮೆರವಣಿಗೆ | ಸಮಿತಿ | 20–22 |
| ೦೩ | ಯಾಣ ಕುರಿತೊಂದು ಪತ್ರ | ಸಮಿತಿ | 22–23 |
| ೦೪ | ಕರ್ನಾಟಕ ಏಕೀಕರಣ | ಸಮಿತಿ | 23–26 |
| 2 | **ಪದ್ಯಭಾಗ** | **ಕವಿಗಳು** | |
| ೦೧ | ಹೊಸಬಾಳು | ಬಿ.ಎಸ್. ಕುರ್ಕಾಲ್ | 26–27 |
| ೦೨ | ಗಂಗವ್ವ ತಾಯಿ | ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ | 27–29 |
| ೦೩ | ಹೃದಯ ವಚನಗಳು | ಅಮೃತ ಸೋಮೇಶ್ವರ | 29 |
| ೦೪ | ಕಿತ್ತೂರ ಕೇಸರಿ | ಪ.ಗು.ಸಿದ್ಧಾಪುರ | 30–31 |
| 3 | **ಪೂರಕ ಪಾಠಗಳು** | **ಲೇಖಕರು** | |
| ೦೧ | ಪುಟ್ಟ ಲಕ್ಷ್ಮಿ ಕತೆ | ಚ.ಹ. ರಘುನಾಥ | 31 |
| ೦೨ | ಹುಚ್ಚು ಹುರುಳು | ಬೀಚಿ | 32 |
| ೦೩ | ಇರುವೆ | ಸಿದ್ದಕಟ್ಟೆ ಚಂದ್ರರಾಜ ಶೆಟ್ಟಿ | 32 |
| 4 | **ವ್ಯಾಕರಣ ಮಾಹಿತಿ** | | |
| ೦೧ | ಸರ್ವನಾಮ | | ವ್ಯಾಕರಣ ಧಾರೆ ಪುಸ್ತಕದಲ್ಲಿದೆ |
| ೦೨ | ತತ್ಸಮ – ತದ್ಭವ | | |
| ೦೩ | ಕರ್ತೃ– ಕರ್ಮ–ಕ್ರಿಯಾ | | |
| ೦೪ | ಸಂಸ್ಕೃತ ಸಂಧಿಗಳು | | |
| ೦೫ | ಪತ್ರಲೇಖನ, ಲೇಖನ ಚಿಹ್ನೆಗಳು | | |
| ೦೬ | ಪ್ರಬಂಧ ರಚನೆ | | |
| ೦೭ | ಸಂದಿಗಳು, ಸಮಾಸಗಳು | | |
| ೦೮ | ದೇಶಿಯ,ಅನ್ಯದೇಶಿಯ ಪದಗಳು | | |

## 6 ನೇ ತರಗತಿ ಪಠ್ಯ ಪುಸ್ತಕದ ಕವಿ–ಕೃತಿ ಪರಿಚಯ

### 1. ದೊಡ್ಡವರ ದಾರಿ



ಲೇಖಕ : ಬೆ.ಗೋ ರಮೇಶ್

ಜನನ : 1945 ಆಗಸ್ಟ್ 22, ಮೈಸೂರು ಜಿ, ಕೃಷ್ಣರಾಜನಗರ ತಾ. ದೊಡ್ಡಹನಸೋಗೆ ಗ್ರಾಮ

ತಾಯಿ : ರಾಧಮ್ಮ, ತಂದೆ : ಬಿ.ಎಸ್. ಗೋವಿಂದರಾಜು

ವಿದ್ಯಾಭ್ಯಾಸ : ಬಿ.ಇ. ಪಧವೀದರರು

ವೃತ್ತಿ : ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು, ಕ.ವಿ.ನಿ.

ಪ್ರವೃತ್ತಿ : ಸಾಹಿತಿ, ಭಾಷಾಂತರಕಾರ, ಗಮಕಿ

ವಚನಗಳ ಅಂಕಿತ : ಶಾಂತಿಪ್ರಿಯ

ಕೃತಿಗಳು

ಕನ್ನಡದಲ್ಲಿ 500 ಕ್ಕಿಂತಲೂ ಹೆಚ್ಚು ಕೃತಿಗಳು

ವಿಶ್ವವಿಖ್ಯಾತ ಮಹಿಳೆಯರು, ನಮ್ಮ ಗಮಕಿಗಳು, ಕನ್ನಡ ಕವಿರತ್ನತ್ರಯರು,

ವಿಜ್ಞಾನಿಗಳ & ದೇಶಭಕ್ತರ ಜೀವನ ಚರಿತ್ರೆಗಳು, ವಚನಸಾಗರ.

ಪ್ರಶಸ್ತಿಗಳು

ವಚನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ: 600 ವಚನಗಳ ಸಂಕಲನ ವಚನಸಾಗರ ಕೃತಿಗೆ

ಸರ್ ಎಂ.ವಿ. ನವರತ್ನ ಪ್ರಶಸ್ತಿ, ಡೆಪ್ಯುಟಿ ಚನ್ನಬಸಪ್ಪ ರಾಜ್ಯ ಪ್ರಶಸ್ತಿ.

ಪ್ರಸ್ತುತ ಪಾಠವನ್ನು ಇವರ ಪ್ರಸಿದ್ದ ವ್ಯಕ್ತಿಗಳ ಬಾಳಿನಲ್ಲಿ ಒಂದು ಘಟನೆ ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### 3. ಕೃಷ್ಣ – ಸುದಾಮ



ಲೇಖಕ : ವಿ.ಎಸ್. ಶಿರಹಟ್ಟಿಮಠರು

ಜನನ : 01–02–1953, ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ

ತಂದೆ : ಶಂಕರಯ್ಯ, ತಾಯಿ : ಗುರುಸಿದ್ದವ್ವ

ವೃತ್ತಿ : ಮುಖ್ಯೋಪಾಧ್ಯಾಯರು, ಶ್ರೀ ವೀರಭದ್ರೇಶ್ವರ ಪ್ರೌಢಶಾಲೆ, ಹಲಗಲಿ ಬಾಗಕೋಟೆ ಜಿ.

ಪ್ರವೃತ್ತಿ : ಅನುವಾದಕರು, ನಾಟಕಕಾರರು.

ಕೃತಿಗಳು

ನಾಟಕಗಳು: ತುಂಬದ ಕೊಡ, ನರಗುಂದ ಬಂಡಾಯ, ಮಾಡಿದ್ದುಣ್ಣೋ ಮಾರಾಯ,

ಗುಣವಂತ ರಾಜಕುಮಾರ ಮುಂತಾದ 60 ಕ್ಕೂ ಹೆಚ್ಚಿನ ಮಕ್ಕಳ ನಾಟಕ ರಚಿಸಿದ್ದಾರೆ.

ಪ್ರಶಸ್ತಿಗಳು

2002 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ

ಪ್ರಸ್ತುತ ಪಾಠವನ್ನು ಇವರ ಹೂವಿನ ಹಂದರ ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### 4. ಡಾ. ರಾಜಕುಮಾರ್



ಲೇಖಕ : ಶ್ರೀಯುತ ದೊಡ್ಡಹುಲ್ಲೂರು ರುಕ್ಕೋಜಿಯವರು

ಜನನ : 1958, ಬೆಂಗಳೂರು ಗ್ರಾಮಾಂತರ ಜಿ. ಹೊಸಕೋಟೆ

ತಾ. ದೊಡ್ಡಹುಲ್ಲೂರಿನಲ್ಲಿ

ಪ್ರವೃತ್ತಿ : ರಂಗಭೂಮಿ, ಪತ್ರಕರ್ತ, ಚಲನಚಿತ್ರ ಮತ್ತು ಬರವಣಿಗೆಗಳು

ಡಾ. ರಾಜಕುಮಾರ್ ಸಮಗ್ರ ಜೀವನಚರಿತ್ರೆಯನ್ನು ಅಭೂತಪೂರ್ವವಾಗಿ ಚಿತ್ರಸಹಿತವಾಗಿ ರಚಿಸಿ ಎರಡು ಮಹಾ ಸಂಪುಟಗಳಲ್ಲಿ ಹೊರತರುವ ಮೂಲಕ ದಾಖಲೆ ನಿರ್ಮಿಸಿದ್ದಾರೆ.

"ಸದನದಲ್ಲಿ ಸಿದ್ಧಲಿಂಗಯ್ಯ" ಎಂಬ ಕೃತಿಯನ್ನು ಎರಡು ಸಂಪುಟಗಳಲ್ಲಿ ಹೊರತಂದಿದ್ದಾರೆ.

ಇವರ "ಡಾ. ರಾಜಕುಮಾರ್‌ಸಮಗ್ರ ಜೀವನಚರಿತ್ರೆ" ಕೃತಿಯಿಂದ ಪ್ರಸ್ತುತ ಗದ್ಯಭಾಗವನ್ನು ಸಂಗ್ರಹಿಸಿ ಕೊಡಲಾಗಿದೆ.

## ಪದ್ಯ ಭಾಗ



### 1. ಬೇಸಿಗೆ

ಕವಿ : ಬಿ.ಆರ್. ಲಕ್ಷ್ಮಣರಾವ್

ಜನನ : 09–09–1945, ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ

ತಾಯಿ : ವೆಂಕಟ ಲಕ್ಷ್ಮಮ್ಮ, ತಂದೆ : ಬಿ.ಆರ್. ರಾಜಾರಾವ್

ವೃತ್ತಿ : ನಿವೃತ್ತ ಉಪಾಧ್ಯಾಯರು.

ಪ್ರವೃತ್ತಿ : ಸಾಹಿತ್ಯ ಸೇವೆ

ಕೃತಿಗಳು

ಕವನ ಸಂಕಲನಗಳು : ಗೋಪಿ & ಗಾಂಡಲೀನ, ಟುವಟಾರ, ಇವಳು ನದಿಯಲ್ಲ, ಸುಬ್ಬಾಭಟ್ಟರ ಮಗಳೇ, ಭಾರತ ಬಿಂದು ರಶ್ಮಿ, ಹನಿಗವಿತೆಗಳು, ವಿನೋದ ಕವಿತೆಗಳು

ನಾಟಕಗಳು : ನನಗ್ಯಾಕೋ ಡೌಟು, ಭಲೇ ಮಲ್ಲೇಶಿ

ಪ್ರಶಸ್ತಿಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

ಪ್ರಸ್ತುತ ಪದ್ಯವನ್ನು ಇವರ ಸುಬ್ಬಾಭಟ್ಟರ ಮಗಳೇ ಭಾವಗೀತೆಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

### 2. ಮಂಗಳ ಗ್ರಹದಲ್ಲಿ ಪುಟ್ಟಿ

ಕವಿ : ಸಿ.ಎಂ. ಗೋವಿಂದರೆಡ್ಡಿ

ಜನನ : 11–08–1958, ಕೋಲಾರ ಜಿಲ್ಲೆಯ ಮಾಲೂರು ತಾ. ಚೆನ್ನಿಗರಾಯಪುರ ಗ್ರಾಮ

ವೃತ್ತಿ : ಸಹಾಯಕ ಪ್ರಾಧ್ಯಾಪಕರು, ಪ್ರಥಮ ದರ್ಜೆ ಕಾಲೇಜು, ಕಾಡುಗೋಡು, ಬೆಂಗಳೂರು

ಪ್ರವೃತ್ತಿ : ಮಕ್ಕಳ ಸಾಹಿತ್ಯ ರಚನೆ



ಕೃತಿಗಳು

ಬಣ್ಣದ ಚಿಟ್ಟೆ, ಮಕ್ಕಳ ಮಂದಾರ, ಪದ್ಯ ಹೇಳುವ ಮರ

ಪ್ರಶಸ್ತಿಗಳು

ಪೆರ್ಲ ಕಾವ್ಯ ಪ್ರಶಸ್ತಿ, ಸಿಸು ಸಂಗಮೇಶ ದತ್ತಿ ಬಹುಮಾನ

ಪ್ರಸ್ತುತ ಪದ್ಯವನ್ನು ಇವರ ಮಕ್ಕಳ ಮಂದಾರ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## 3. ನೀ ಹೋದ ಮರುದಿನ



ಕವಿ : ಡಾ. ಚೆನ್ನಣ್ಣ ವಾಲಿಕಾರರವರು

ಜನನ : 1943 ರಂದು ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿ

ತಂದೆ : ಧಳಪ್ಪ ವಾಲಿಕಾರ, ತಾಯಿ: ಸಾಬವ್ವ,

ವಿದ್ಯಾಭ್ಯಾಸ : ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ, ಪಿಹೆಚ್.ಡಿ

ವೃತ್ತಿ : ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ.

### ಕೃತಿಗಳು

ಕವನ ಸಂಕಲನಗಳು : ಮರದ ನೀರಿನ ಗಾಳಿ, ಪ್ಯಾಂಥರ್ಸ್ ಪದ್ಯಗಳು, ಧಿಕ್ಕಾರದ ಹಾಡುಗಳು

ಕಥಾ ಸಂಕಲನಗಳು: ಕಪ್ಪು ಕತೆಗಳು, ಹೆಪ್ಪುಗಟ್ಟಿದ ಸಮುದ್ರ, ಕುತದ್ದಲಿ ಕುದ್ದವರ ಕತೆಗಳು

ಮಹಾ ಕಾವ್ಯಗಳು : ವ್ಯೋಮ ವ್ಯೋಮ,ಸುನೀತಂಗಳ ಸುಖಾವ್ಯಾಮೃತ

ನಾಟಕಗಳು : ಟೊಂಕದ ಕೆಳಗಿನ ಜನ, ನರಭಕ್ಷಕ ರಾಜನ ಕಥೆ, ತಲೆ ಹಾಕುವವರು

ಪ್ರಶಸ್ತಿಗಳು: ಕರ್ನಾಟಕ ಜಾನಪದ ಅಕಾಡೆಮಿ ಗೌರವ,
ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ,
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಸ್ತುತ ಕವಿತೆಯನ್ನು ಇವರ ಸಮಗ್ರ ಕಾವ್ಯ ಸಂಪುಟದಿಂದ ಆರಿಸಿಕೊಳ್ಳಲಾಗಿದೆ.ಕ

## 4. ಮಗು ಮತ್ತು ಹಣ್ಣುಗಳು



ಕವಿ : ಶ್ರೀ ಎಚ್. ಎಸ್. ಶಿವಪ್ರಕಾಶ್

ಜನನ : 1954, ಬೆಂಗಳೂರು

ವೃತ್ತಿ : ಇಂಗ್ಲಿಷ್ ಪ್ರಾದ್ಯಾಪಕರು

ಕೃತಿಗಳು : ಮಹಾಚೈತ್ರ, ಸುಲ್ತಾನ್ ಟಿಪ್ಪು, ನವಿಲು ನಗರ, ಮಳೆಬಿದ್ದ ನೆಲದಲ್ಲಿ

ಪ್ರಶಸ್ತಿಗಳು : ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ,
ಕೇಂದ್ರ ಸಂಗೀತ ನಾಟಕ ಅಕಾಡೆಮಿ,
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

## ಗದ್ಯ ಭಾಗ

## 1. ದೊಡ್ಡವರ ದಾರಿ –ಬೆ.ಗೋ. ರಮೇಶ್

### ಅಭ್ಯಾಸಗಳು

**ಅ. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ಬಿಟ್ಟಸ್ಥಳ ಭರ್ತಿಮಾಡಿರಿ.**

1. ಮಕ್ಕಳಿಗೆ ತಮ್ಮ________________ಅರಿವಾಗಬೇಕು ಎಂದೆನಿಸಿತು. ಉ: ತಪ್ಪಿನ
2. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು ____________ ಕೊಟ್ಟರು. ಉ: ಕಾಸು
3. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ತಾವೇ ಒಂದು ___________ಕಂಡುಕೊಂಡರು. ಉ: ಉಪಾಯ
4. ಒಂದಿಬ್ಬರು ________________ಹಾಕಿಸಿಕೊಂಡೂ ಆಗಿತ್ತು. ಉ: ಪಾಲಿಶ್

(ಪಾಲಿಶ್, ಕಾಸು, ಕಾಗದದ ಚೂರು, ತಪ್ಪಿನ, ದಾರಿ)

**ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿರಿ.**

1. ರಾಷ್ಟ್ರಪತಿ : ಅಬ್ದುಲ್ ಕಲಾಂ ಈ ದೇಶ ಕಂಡ ಉತ್ತಮ ರಾಷ್ಟ್ರಪತಿ

2. ಕಾಸು : ನನ್ನ ಅಜ್ಜಿ ಪುಸ್ತಕ ತರಲು ಕಾಸು ಕೊಡುತ್ತಾಳೆ.
3. ಶಿಸ್ತು : ನಾವು ಈ ಜೀವನದಲ್ಲಿ ಶಿಸ್ತನ್ನು ಕಲಿಯಬೇಕು.
4. ದಾರಿ : ದೊಡ್ಡವರು ಹೇಳಿದ ದಾರಿಯಲ್ಲಿ ನಾವು ನಡೆಯಬೇಕು.

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ರಾಜೇಂದ್ರ ಪ್ರಸಾದರು ತಾವು ಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು?
ಉ: ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.
2. ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ಪ್ರಸಾದರು ಏನನ್ನು ಕೊಟ್ಟರು? ಉ: ಕಾಸನ್ನು ಕೊಟ್ಟರು.
3. ಯಾವುದು ಒಳ್ಳೆಯ ಅಭ್ಯಾಸವಲ್ಲ ಎಂದು ಪ್ರಸಾದರು ಮಕ್ಕಳಿಗೆ ಹೇಳಿದರು?
ಉ: ಪುಸ್ತಕದ ಪುಟಗಳನ್ನು ಹರಿದು ಹಾಕುವುದು ಒಳ್ಳೆಯ ಅಭ್ಯಾಸವಲ್ಲ ಎಂದು ಹೇಳಿದರು.
4. ಜಾಮಿಯಾ ಮಿಲಿಯಾ ಎಲ್ಲಿದೆ?
ಉ: ದೆಹಲಿಯಲ್ಲಿದೆ.
5. ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಯಾವ ವೇಷ ಹಾಕಿದರು?
ಉ: ಬೂಟ್ ಪಾಲಿಶ್ ಹಾಕುವವನ ವೇಷ ಹಾಕಿದರು.

**ಈ. ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು?**

1. "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ."
**ವಾಕ್ಯ:** "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ."
**ಆಯ್ಕೆ:** ಈ ವಾಕ್ಯವನ್ನು ದೊಡ್ಡವರ ದಾರಿ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ರಾಜೇಂದ್ರ ಪ್ರಸಾದರು
**ಯಾರಿಗೆ:** ಮಕ್ಕಳಿಗೆ
**ಯಾವಾಗ :** ಮಕ್ಕಳು ಪುಸ್ತಕದ ಪುಟಗಳನ್ನು ಹರಿದಾಗ
2. "ತಾತಾ, ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ."
**ವಾಕ್ಯ:** "ತಾತಾ, ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ."
**ಆಯ್ಕೆ:** ಈ ವಾಕ್ಯವನ್ನು ದೊಡ್ಡವರ ದಾರಿ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಮಕ್ಕಳು
**ಯಾರಿಗೆ:** ರಾಜೇಂದ್ರ ಪ್ರಸಾದರಿಗೆ
**ಯಾವಾಗ :** ಮಕ್ಕಳಿಗೆ ತಮ್ಮ ತಪ್ಪಿನ ಅರಿವಾದಾಗ.

**ಉ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವ ಎಂಥದ್ದು? ವಿವರಿಸಿರಿ.
ಉ: ಡಾ. ರಾಜೇಂದ್ರ ಪ್ರಸಾದರು ಭಾರತದ ಪ್ರಥಮ ರಾಷ್ಟ್ರಪತಿಗಳು. ಅತ್ಯಂತ ಉನ್ನತ ಸ್ಥಾನಕ್ಕೇರಿದರೂ ಸರಳ ಜೀವನ ನಡೆಸಿದವರು. ಜನಕ ಮಹಾರಾಜನಂತೆ ಅವರದು ಋಷಿಸದೃಶ ಜೀವನ. ಬಾಳಿನಲ್ಲಿ ಶಿಸ್ತು, ಸಂಯಮ, ಸಮಯಪಾಲನೆ ಇವುಗಳಿಗೆ ಭಾರಿ ಮಹತ್ವ ನೀಡುತ್ತಿದ್ದರು. ತಾವು ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.
2. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್‌ಹುಸೇನ್ ಏನು ಮಾಡಿದರು? ವಿವರಿಸಿರಿ.
ಉ: ಒಂದುದಿನ ವಿಶ್ವವಿದ್ಯಾನಿಲಯದ ಪ್ರವೇಶದ್ವಾರದಲ್ಲಿ ಜಾಕಿರ್ ಹುಸೇನರು ಒಬ್ಬ ಬೂಟ್‌ಪಾಲಿಶ್ ಹಾಕುವವನ ವೇಷದಲ್ಲಿ ಕುಳಿತಿದ್ದು ವಿದ್ಯಾರ್ಥಿಗಳ ಗಮನಕ್ಕೆ ಬಂತು. ಕುಲಪತಿಗಳು ಕೈಯಲ್ಲಿ ಪಾಲಿಶ್ ಡಬ್ಬಿ, ಬ್ರಷ್ ಹಿಡಿದು ಕುಳಿತಿದ್ದ ದೃಶ್ಯ ಕಂಡ ವಿದ್ಯಾರ್ಥಿಗಳು ತಮ್ಮ ವರ್ತನೆಗೆ ನಾಚಿದರು. ಒಂದಿಬ್ಬರು ಪಾಲಿಶ್ ಹಾಕಿಸಿಕೊಂಡೂ ಆಗಿತ್ತು.
3. ಬೆ.ಗೋ. ರಮೇಶ್ ಅವರ ಸ್ಥಳ, ಕಾಲ, ಕೃತಿಗಳನ್ನು ತಿಳಿಸಿರಿ.
ಉ: ಸ್ಥಳ : ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನ ದೊಡ್ಡಹನಸೋಗೆ.
ಕಾಲ: 22 ನೇ ಆಗಸ್ಟ್ 1945.
ಕೃತಿ: ವಿಶ್ವವಿಖ್ಯಾತ ಮಹಿಳೆಯರು, ನಮ್ಮ ಗಮಕಿಗಳು, ಕನ್ನಡ ಕವಿರತ್ನತ್ರಯರು.

**ಊ. ವಚನ ಬದಲಿಸಿ ಬರೆಯಿರಿ.**

1. ಗಿಡ : ಗಿಡಗಳು
2. ತಮ್ಮಂದಿರು : ತಮ್ಮ
3. ಪತ್ರಗಳು : ಪತ್ರ
4. ಮಗು : ಮಕ್ಕಳು

**ಋ. ಪುಲ್ಲಿಂಗ ಅಥವಾ ಸ್ತ್ರೀಲಿಂಗ ರೂಪಕ್ಕೆ ಪರಿವರ್ತಿಸಿ ಬರೆಯಿರಿ.**

1. ಅವನು : ಅವಳು

2. ಇವಳು : ಇವನು
3. ಗೌಡತಿ : ಗೌಡ
4. ಶರಣ: ಶರಣೆ

**ಎ. ಕೆಳಗಿನವುಗಳಿಗೆ ನಾಲ್ಕು ಉದಾಹರಣೆಗಳನ್ನು ಕೊಡಿರಿ.**

1) ಅನ್ವರ್ಥನಾಮ : ಕಿವುಡ, ಶಿಕ್ಷಕ, ಕಳ್ಳ, ಕರಿಯ
2) ರೂಢನಾಮ : ಹುಡುಗ, ನದಿ, ಮನೆ, ಪರ್ವತ
3) ಅಂಕಿತನಾಮ : ಗುಂಜಲಪ್ಪ, ಯಾದಗಿರಿ, ಆನೆ, ಕೋಗಿಲೆ.

## 2. ಗಂಧರ್ವಸೇನ! –ಸಮಿತಿ

### ಅಭ್ಯಾಸಗಳು

**ಅ. ಸರಿಯಾದ ಪದಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ.**

1. ರಾಜನು ____________ವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿದ. ಉ: ಒಡ್ಡೋಲಗ
(ಒಡ್ಡೋಲಗ, ಬಡ್ಡೋಲಗ, ಓಡ್ಡೋಲಗ)
2. ಸೇವಕಿ __________ಬುದ್ಧಿಯವಳು. (ಮುರುಕು, ತಳುಕು, ಚುರುಕು) ಉ: ಚುರುಕು
3. ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು __________ಹೇಳಿದ. ಉ: ನಿಜಾಂಶ
(ನಿಜಾಂಶ, ಸತ್ಯಾಂಶ, ಮಿಥ್ಯಾಂಶ)
4. ರಾಜನಿಗೆ ಗಂಧರ್ವಸೇನ ತೀರಿದ ವಿಷಯ ತಿಳಿಸಿದ್ದು ______________ ಉ: ಮಂತ್ರಿ
(ಮಂತ್ರಿ, ರಾಣಿ, ಸೇವಕಿ)
5. ಅಂತಃಪುರ ಇದರ ಅರ್ಥ__________ (ರಾಣಿವಾಸ, ಸೇವಕಿಯರ ವಾಸ, ರಾಜಗೃಹ) ಉ: ರಾಣಿವಾಸ

**ಆ. ಈ ಪದಗಳ ಅರ್ಥ ಬರೆಯಿರಿ.**

1. ನಿಟ್ಟುಸಿರು ; ದೀರ್ಘವಾದ ಉಸಿರು
2. ಪರಿಸಮಾಪ್ತಿ : ಮುಕ್ತಾಯ, ಕೊನೆ
3. ಮಾರ್ನುಡಿ : ಮರು ಉತ್ತರ
4. ಉದ್ಗರಿಸು : ಜೋರಾಗಿ ಹೇಳು.

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಮಂತ್ರಿ ಅಳುತ್ತಾ ರಾಜನ ಬಳಿ ಏನೆಂದು ಹೇಳಿದ?
ಉ: ಮಹಾರಾಜರೇ ಗಂಧರ್ವಸೇನರು ತೀರಿಕೊಂಡರಂತೆ ಎಂದು ಹೇಳಿದ.
2. ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ಯಾರಿಗೆ ಹೇಳಿದ?
ಉ: ರಾಣಿಯರಿಗೆ ಹೇಳಿದ.
3. ರಾಣಿಯ ಸೇವಕಿ ಏನೆಂದು ಆಲೋಚನೆ ಮಾಡಿದಳು?
ಉ: ಈ ನಮ್ಮ ಮಹಾರಾಜರಿಗೂ ಮತ್ತು ಗಂಧರ್ವಸೇನರಿಗೂ ಏನು ಸಂಬಂಧ ಎಂದು ಆಲೋಚಿಸಿದಳು.
4. ಮಂತ್ರಿ ಗಂಧರ್ವಸೇನನ ವಿಚಾರ ತಿಳಿಯಲು ಯಾರು ಯಾರನ್ನು ಭೇಟಿ ಮಾಡಿದ?
ಉ: ರಾಣಿ, ಪಡೆಯ ಮುಖ್ಯಸ್ಥ, ಪಡೆಯ ಮುಖ್ಯಸ್ಥನ ಹೆಂಡತಿ, ಮಡಿವಾಳ್ತಿಯನ್ನು ಭೇಟಿ ಮಾಡಿದ.
5. ರಾಣಿಯರು ನಗಲು ಕಾರಣವೇನು?
ಉ: ಗಂಧರ್ವಸೇನ ಮಡಿವಾಳ್ತಿಯ ಪ್ರೀತಿಯ ಕತ್ತೆ ಎಂದು ತಿಳಿದು ನಕ್ಕರು.

**ಈ. ಕೆಳಗಿನ ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ರಾಜನ ಒಡ್ಡೋಲಗದಲ್ಲಿ ನಡೆದ ಪ್ರಸಂಗವನ್ನು ವಿವರಿಸಿರಿ.
ಉ: ಒಂದು ದಿನ ಒಬ್ಬ ರಾಜ ಒಡ್ಡೋಲಗದಲ್ಲಿದ್ದಾಗ ಅವನ ಮಂತ್ರಿ ಗಟ್ಟಿಯಾಗಿ ಅಳುತ್ತಾ ಬಂದನು. ಅವನ ರೋದನಕ್ಕೆ ಕಾರಣವೇನೆಂದು ರಾಜ ಪ್ರಶ್ನಿಸಿದ. ಮಂತ್ರಿಯು ಸಿಂಹಾಸನವನ್ನು ಚುಂಬಿಸಿ, ಭೂಮಿಯನ್ನು ಮುಟ್ಟಿ ನಮಸ್ಕರಿಸಿ ತನ್ನ ನಾಲಗೆಯನ್ನು ಉದ್ದ ಮಾಡಿ – 'ಮಹಾರಾಜರೇ ಗಂಧರ್ವಸೇನರು ತೀರಿಕೊಂಡರಂತೆ' ಎಂದು ಉದ್ಗರಿಸುತ್ತಾ ಮೂರ್ಛೆ ಹೋದ. ರಾಜನು ಒಡ್ಡೋಲಗವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿ ಕಣ್ಣೀರು ಸುರಿಸುತ್ತ ಗಂಧರ್ವಸೇನರ ಆತ್ಮಶಾಂತಿಗಾಗಿ ನಾಲ್ಕು ದಿನಗಳ ಕಾಲ ರಾಜ್ಯಾದ್ಯಂತ ಎಲ್ಲರೂ ಶೋಕಾಚರಣೆ ಮಾಡಬೇಕೆಂದು ಆಜ್ಞಾಪಿಸಿದ.

**ಉ. ಸಂದರ್ಭ ಸಹಿತ ವಿವರಿಸಿರಿ.**

1. "ರಾಜ ಅಲ್ಲಿಯೂ ಕರುಳು ಕಿತ್ತು ಬರುವಂತೆ ಅಳತೊಡಗಿದ."
ಉ: **ವಾಕ್ಯ:** "ರಾಜ ಅಲ್ಲಿಯೂ ಕರುಳು ಕಿತ್ತು ಬರುವಂತೆ ಅಳತೊಡಗಿದ."
**ಆಯ್ಕೆ:** ಈ ವಾಕ್ಯವನ್ನು ಗಂಧರ್ವಸೇನ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಯಾರು:** ಲೇಖಕರು
**ಯಾರಿಗೆ:** ನಮಗೆ
**ಯಾವಾಗ :** ರಾಜ ಗಂಧರ್ವ ತೀರಿಕೊಂಡ ವಿಷಯ ರಾಣಿಯರಿಗೆ ತಿಳಿಸುವಾಗ.
2. "ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು."
ಉ: **ವಾಕ್ಯ:** "ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು."
**ಆಯ್ಕೆ:** ಈ ವಾಕ್ಯವನ್ನು ಗಂಧರ್ವಸೇನ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಪಡೆಯ ಮುಖ್ಯಸ್ಥ
**ಯಾರಿಗೆ:** ಮಂತ್ರಿಗೆ
**ಯಾವಾಗ :** ಮಂತ್ರಿ ಗಂಧರ್ವಸೇನನ ಬಗ್ಗೆ ಪಡೆಯ ಮುಖ್ಯಸ್ಥನಲ್ಲಿ ವಿಚಾರಿಸಿದಾಗ.
3. "ನಿನ್ನೆ ರಾತ್ರಿ ಕಣ್ಣು ಮುಚ್ಕೊಂಬಿಟ್ಟ."
ಉ: **ವಾಕ್ಯ:** "ನಿನ್ನೆ ರಾತ್ರಿ ಕಣ್ಣು ಮುಚ್ಕೊಂಬಿಟ್ಟ."
**ಆಯ್ಕೆ:** ಈ ವಾಕ್ಯವನ್ನು ಗಂಧರ್ವಸೇನ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಮಡಿವಾಳ್ತಿ
**ಯಾರಿಗೆ:** ಮಂತ್ರಿಗೆ
**ಯಾವಾಗ :** ಮಂತ್ರಿ ಗಂಧರ್ವಸೇನನ ಬಗ್ಗೆ ಮಡಿವಾಳ್ತಿ ವಿಚಾರಿಸಿದಾಗ.
4. "ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು."
ಉ: **ವಾಕ್ಯ:** "ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು."
**ಆಯ್ಕೆ:** ಈ ವಾಕ್ಯವನ್ನು ಗಂಧರ್ವಸೇನ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ರಾಣಿಯರು
**ಯಾರಿಗೆ:** ಮಂತ್ರಿಗೆ
**ಯಾವಾಗ :** ಗಂಧರ್ವ ಸೇನರು ಯಾರು ಎಂದು ನಿಜಾಂಶ ತಿಳಿದಾಗ.

**ಊ. ಕೆಳಗಿನವುಗಳನ್ನು ನುಡಿಗಟ್ಟು, ಗಾದೆ, ಒಗಟುಗಳಾಗಿ ವಿಂಗಡಿಸಿ ಬರೆಯಿರಿ.**

1. ಮೂಗು ತೂರಿಸು, 2. ಕೇಳಿದ ಕಿವಿ ಊರಿಗೆ ಮಾರಿ ತಂದಿತು, 3. ಕಾಲಿಗೆ ಬುದ್ಧಿಹೇಳು, 4. ದಾಸ್ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೆ ಬುರುಡೆ, 5. ಬೆನ್ನಿಗೆ ಚೂರಿ ಹಾಕು, 6. ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು, 7. ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ, 8. ತಲೆ ಹಾಕು, 9. ಮುಚ್ಚಿಟ್ಟದ್ದು ಮಣ್ಣಿನ ಪಾಲು, 10. ಕರುಳು ಹಿಂಡು, 11. ಮಂಕು ಬೂದಿ, 12. ಚಿಕ್ಕ ತೋಟ ಚೂರು ಕಸ ಬಿದ್ದರೆ ಹಾಳು.

**ನುಡಿಗಟ್ಟು:** ಮೂಗು ತೀರಿಸು, ಕಾಲಿಗೆ ಬುದ್ಧಿ ಹೇಳು, ಬೆನ್ನಿಗೆ ಚೂರಿ ಹಾಕು, ಕರುಳು ಹಿಂಡು, ಮಂಕು ಬೂದಿ.
**ಗಾದೆ:** ಕೇಳಿದ ಕಿವಿ ಊರಿಗೆ ಮಾರಿ ತಂದಿತು, ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು, ಮುಚ್ಚಿಟ್ಟದ್ದು ಮಣ್ಣಿನ ಪಾಲು. ಚಿಕ್ಕ ತೋಟ ಚೂರು ಕಸ ಬಿದ್ದರೆ ಹಾಳು.
**ಒಗಟು:** ದಾಸ್ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೆ ಬುರುಡೆ, ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ,

## 3. ಕೃಷ್ಣ – ಸುದಾಮ (ನಾಟಕ) –ವಿ.ಎಸ್ ಶಿರಹಟ್ಟಿ ಮಠ

### ಅಭ್ಯಾಸಗಳು

**ಅ. ಈ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

1. ಗೆಳೆಯ = ಸ್ನೇಹಿತ, ಜೊತೆಗಾರ
2. ಹೆಂಡತಿ = ಪತ್ನಿ, ಅರ್ಧಾಂಗಿ
3. ರಾಜ = ದೊರೆ, ಪ್ರಭು
4. ದುಡಿಮೆ = ಕೆಲಸ, ಕರ್ತವ್ಯ

**ಆ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

1. ಪರಮಮಿತ್ರ : ನಾವು ಪರಮಮಿತ್ರರನ್ನು ಮರೆಯಬಾರದು.
2. ವಿಶ್ರಾಂತಿ : ಮಕ್ಕಳು ಓಡಿದಾಗ ವಿಶ್ರಾಂತಿ ಪಡೆಯುತ್ತಾರೆ.
3. ಸತ್ಕಾರ : ನಮ್ಮ ಮನೆಗೆ ಅತಿಥಿಗಳು ಬಂದಾಗ ನಾವು ಸತ್ಕರಿಸುತ್ತೇವೆ.
4. ಸಂತೋಷ : ನಾನು ಚೆನ್ನಾಗಿ ಓದಿ ಶಿಕ್ಷಕರಿಂದ ಹೊಗಳಿಸಿಕೊಂಡಾಗ ಸಂತೋಷವಾಗುತ್ತದೆ.
5. ಶ್ರಮಿಸು : ಸೈನಿಕರು ನಮ್ಮನ್ನು ಕಾಪಾಡಲು ಸಾಕಷ್ಟು ಶ್ರಮಿಸುತ್ತಾರೆ.

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸುದಾಮ ಯಾವುದನ್ನು ಮಾನವಧರ್ಮ ಎನ್ನುತ್ತಾನೆ?

ಉ: ಜೀವನದಲ್ಲಿ ಬಂದದ್ದನ್ನು ಅನುಭವಿಸಲೇಭೇಕು ಅದುವೇ ಮಾನವ ಧರ್ಮ.
2. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?
ಉ: ಮಕ್ಕಳಿಗಾಗಿ
3. ಸುದಾಮನ ಕಣ್ಣಲ್ಲಿ ನೀರು ಏಕೆ ಬಂತು?
ಉ: ಬಹಳ ದಿನಗಳ ನಂತರ ಶ್ರೀ ಕೃಷ್ಣನ್ನು ನೊಡಿದಾಗ ಕಣ್ಣಲ್ಲಿ ನೀರು ಬಂತು.
4. ಮನೆಗೆ ಮರಳಿದ ಸುಧಾಮನು ಏನನ್ನು ಕಂಡನು?
ಉ : ಗುಡಿಸಲಿನ ಜಾಗದಲ್ಲಿ ಅರಮನೆಯಂತಹ ಮನೆ ನಿರ್ಮಾಣವಾಗಿದೆ.

5. ಸುದಾಮನ ಮನೆಯನ್ನು ಕಟ್ಟಿಸಿದವರು ಯಾರು?
ಉ: ಶ್ರೀ ಕೃಷ್ಣ ಕಟ್ಟಿಸಿದನು.

**ಈ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕೃಷ್ಣ-ಸುದಾಮರು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡದ್ದು ಹೇಗೆ?
ಉ: ಒಟ್ಟಿಗೆ ಊಟ ಮಾಡಿದ್ದು, ಕೂಡಿ ಕಲಿಯುತ್ತಿದ್ದಿದು, ಕಟ್ಟಿಗೆ ತರಲು ಹೋಗುತ್ತಿದ್ದದು, ಗುರುಮಾತೆ ಕೊಟ್ಟ ಹುರಿದ ಕಡಲೆ ತಿಂದಿದ್ದು. ಸುಧಾಮನ ಪಾಲಿನ ಕಡಲೆ ಕೃಷ್ಣ ಕಸಿದುಕೊಂಡದ್ದು.
2. ಕೃಷ್ಣನು ಸುದಾಮನಿಗೆ ಮನೆ ಕಟ್ಟಿಸಿಕೊಟ್ಟ ಸಂದರ್ಭವನ್ನು ವಿವರಿಸಿರಿ.
ಉ: ಸುಧಾಮ ದ್ವಾರಕಾ ನಗರ ತಲುಪಿದ ದಿನವೇ ಅಲ್ಲಿಂದ ಸೇವಕರ ದಂಡು ಬಂದು ಬೇಕಾದ ಎಲ್ಲ ವಸ್ತುಗಳನ್ನು ತಂದು ಚಕಾಚಕಾಂತ ಮನೆ ನಿರ್ಮಿಸಿದರು.

**ಉ. ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?**

1. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.
ಉ: **ವಾಕ್ಯ:** ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.
**ಆಯ್ಕೆ:** ಈ ವಾಕ್ಯವನ್ನು ಕೃಷ್ಣ-ಸುಧಾಮ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಸುಧಾಮ
**ಯಾರಿಗೆ:** ತನ್ನ ಹೆಂಡತಿಗೆ
**ಯಾವಾಗ :** ಕೃಷ್ಣ ನನ್ನ ಸ್ನೇಹಿತ ಎಂದಾಗ ಹೆಂಡತಿ ಅದನ್ನು ನಂಬದಿದ್ದಾಗ.
2. ಹಸಿದಿರುವ ಮಕ್ಕಳಿಗೋಸ್ಕರನಾದರೂ ಹೋಗಿ ಕೇಳಿ.
ಉ: **ವಾಕ್ಯ:** ಹಸಿದಿರುವ ಮಕ್ಕಳಿಗೋಸ್ಕರನಾದರೂ ಹೋಗಿ ಕೇಳಿ..
**ಆಯ್ಕೆ:** ಈ ವಾಕ್ಯವನ್ನು ಕೃಷ್ಣ-ಸುಧಾಮ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಸುಧಾಮನ ಹೆಂಡತಿ
**ಯಾರಿಗೆ:** ಸುಧಾಮನಿಗೆ
**ಯಾವಾಗ :** ಸುಧಾಮ ಕೃಷ್ಣನ ಹತ್ತಿರ ಸಹಾಯ ಕೇಳಲು ಸಂಕೋಚ ಮಾಡಿಕೊಂಡಾಗ
3. ನನಗೆ ಗುರುಕುಲದ ಜೀವನ ನೆನಪಾಗುತ್ತದೆ.
ಉ: **ವಾಕ್ಯ:** ನನಗೆ ಗುರುಕುಲದ ಜೀವನ ನೆನಪಾಗುತ್ತದೆ
**ಆಯ್ಕೆ:** ಈ ವಾಕ್ಯವನ್ನು ಕೃಷ್ಣ-ಸುಧಾಮ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಕೃಷ್ಣ
**ಯಾರಿಗೆ:** ಸುಧಾಮನಿಗೆ
**ಯಾವಾಗ :** ಸುಧಾಮ ಕೃಷ್ಣನ ಮನೆಗೆ ಹೋಗಿ ಊಟ ಮಾಡುವ ಸಮಯದಲ್ಲಿ
4. ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ.
**ವಾಕ್ಯ:** ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ.
**ಆಯ್ಕೆ:** ಈ ವಾಕ್ಯವನ್ನು ಕೃಷ್ಣ-ಸುಧಾಮ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಯಾರು:** ಸುಧಾಮನ ಮಗ
**ಯಾರಿಗೆ:** ಸುಧಾಮನಿಗೆ
**ಯಾವಾಗ :** ಕೃಷ್ಣ ವಾಪಾಸು ತನ್ನ ಮನೆಗೆ ಬಂದಾಗ

**ಊ. ಕೆಳಗಿನ ವಾಕ್ಯಗಳಲ್ಲಿಯ ಕರ್ತೃ/ಕರ್ಮ/ಕ್ರಿಯಾಪದಗಳನ್ನು ಗುರುತಿಸಿ ಪಟ್ಟಿ ಮಾಡಿ ಬರೆಯಿರಿ.**

1. ಸರಸ್ವತಿ ಶಾಲೆಗೆ ಹೋಗುತ್ತಾಳೆ.
ಉ: ಕರ್ತೃ : ಸರಸ್ವತಿ, ಕರ್ಮ: ಶಾಲೆಗೆ , ಕ್ರಿಯಾ : ಹೋಗುತ್ತಾಳೆ.
2. ಮಹಮ್ಮದನು ಮನೆಗೆ ಬರುತ್ತಾನೆ.

ಕರ್ತೃ : ಮಹಮ್ಮದ,  ಕರ್ಮ: ಮನೆಗೆ,  ಕ್ರಿಯಾ : ಬಂದನು.
3. ಗಿಳಿಗಳು ಆಕಾಶದಲ್ಲಿ ಹಾರಾಡುತ್ತವೆ.
ಕರ್ತೃ : ಗಿಳಿಗಳು,  ಕರ್ಮ: ಆಕಾಶದಲ್ಲಿ , ಕ್ರಿಯಾ: ಹಾರಾಡುತ್ತವೆ.

**ಋ. ಕರ್ತೃ/ಕರ್ಮ/ಕ್ರಿಯಾಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯಗಳನ್ನು ಬರೆಯಿರಿ.**

ಉದಾ: ಎಳೆಯುತ್ತದೆ ಬಂಡಿಯನ್ನು ಎತ್ತು
ಎತ್ತು ಬಂಡಿಯನ್ನು ಎಳೆಯುತ್ತದೆ.
1. ಬೀಳುತ್ತದೆ ಕಾಯಿ ಮರದಿಂದ.
ಉ: ಕಾಯಿ ಮರದಿಂದ ಬೀಳುತ್ತದೆ.

2. ಅಹಿಂಸೆಯನ್ನು ಪ್ರತಿಪಾದಿಸಿದರು ಗಾಂಧೀಜಿ.
ಉ: ಗಾಂಧೀಜಿ ಅಹಿಂಸೆಯನ್ನು ಪ್ರತಿಪಾದಿಸಿದರು.
3. ಉದಯಿಸುತ್ತಾನೆ ಸೂರ್ಯನು ಮುಂಜಾನೆ.
**ಉ:** ಸೂರ್ಯನು ಮುಂಜಾನೆ ಉದಯಿಸುತ್ತಾನೆ.

## 4. ಡಾ. ರಾಜಕುಮಾರ್ –ದೊಡ್ಡಹುಲ್ಲೂರು ರುಕ್ಕೋಜಿರಾವ್

### ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:**

1. ಡಾ.ರಾಜಕುಮಾರ್ ಅವರು ಜನಿಸಿದ್ದು ಯಾವಾಗ?
ಉ: 24 ನೇ ಏಪ್ರಿಲ್ 1929 ರಂದು ಜನಿಸಿದರು.
2. ರಾಜಕುಮಾರರ ಹುಟ್ಟೂರು ಯಾವುದು?
ಉ: ಗಾಜನೂರು
3. ರಾಜಕುಮಾರ್ ಅವರ ತಂದೆ–ತಾಯಿಯ ಹೆಸರೇನು?
ಉ: ತಂದೆ ಶ್ರೀ ಪುಟ್ಟಸ್ವಾಮಯ್ಯ, ತಾಯಿ: ಶ್ರೀಮತಿ ಲಕ್ಷ್ಮಮ್ಮನವರು.
4. 'ಮುತ್ತುರಾಜ' ಎಂಬುದು ಯಾರ ಹುಟ್ಟು ಹೆಸರು?
ಉ: ಡಾ. ರಾಜಕುಮಾರ್
5. ಗುಬ್ಬಿ ವೀರಣ್ಣನವರ ಕಂಪನಿ ಹೆಸರೇನು?
ಉ:
6. ರಾಜಕುಮಾರರು ಮೊದಲು ನಾಯಕನಟರಾದ ಸಿನಿಮಾ ಯಾವುದು?
ಉ: ಬೇಡರ ಕಣ್ಣಪ್ಪ.
7. ರಾಜಕುಮಾರ್ ಅವರ ಶ್ರೀಮತಿಯವರ ಹೆಸರೇನು?
ಉ: ಶ್ರೀಮತಿ ಪಾರ್ವತಿ
8. 1992ರಲ್ಲಿ ಕರ್ನಾಟಕ ಸರ್ಕಾರವು ರಾಜಕುಮಾರರಿಗೆ ನೀಡಿದ ಪ್ರಶಸ್ತಿ ಯಾವುದು?
ಉ: ಕರ್ನಾಟಕ ರತ್ನ ಪ್ರಶಸ್ತಿ ನೀಡಿತು.

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಊರಿನ ಜನರು ಮುತ್ತುರಾಜ ಜನಿಸಿದಾಗ ಏಕೆ ಸಂಭ್ರಮಪಟ್ಟರು?
ಉ: ಮಳೆಯೇ ಇಲ್ಲದ ಭೂಮಿಗೆ ಜೋರಾಗಿ ಮಳೆ ಬಂದು ತಂಪನ್ನು ನೀಡಿದಾಗ ಮುತ್ತುರಾಜ ಜನಿಸಿದ್ದರಿಂದ ಜನರು ಸಂಭ್ರಮಿಸಿದರು.
2. 'ಮುತ್ತುರಾಜ' ಎಂಬ ಹೆಸರಿಡಲು ಕಾರಣವೇನು?
ಉ: ತಂದೆಯವರು ತಾವು ಮುತ್ತತ್ತಿರಾಯನಿಗೆ ಹೊತ್ತ ಹರಕೆಯಿಂದ ಜನಿಸಿದ ವರಪ್ರಸಾದವಾದ್ದರಿಂದ ಮುತ್ತುರಾಜನೆಂಬ ಹೆಸರಿಟ್ಟರು.
3. ಬಾಲ್ಯದಲ್ಲಿ ಮುತ್ತುರಾಜನಿಗೆ ಒದಗಿದ ಅನುಭವಗಳಾವುವು?
ಉ: ಬಡತನ, ಹಸಿವು, ಜಗಳ ಜಾತ್ರೆ, ಪೂಜೆ, ಉತ್ಸವ, ಹೊಲ, ತೋಟ,  ಕಾಡು–ತೊರೆ, ಬಂಧು–ಬಳಗ, ತಾಯಿಯ ವಾತ್ಸಲ್ಯಧಾರೆ ಈತರಹದ ಅನುಭವಗಲಾದವು.
4. ರಂಗಭೂಮಿಯೊಂದಿಗೆ ರಾಜಕುಮಾರರ ಬಾಂಧವ್ಯ ಯಾವ ಬಗೆಯದು?
ಉ: ಬಾಲಕನಾಗಿರುವಾಗಲೇ ತಂದೆಯೊಂದಿಗೆ ರಂಗಭೂಮಿಗೆ ಬಂದು ಗುಬ್ಬಿ ವೀರಣ್ಣನ ಕಂಪನಿಯಲ್ಲಿ ಬಾಲ ಕಲಾವಿದರಾಗಿ ಸುಬ್ಬಯ್ಯನಾಯ್ಡು ಅವರ ಕಂಪನಿಯಲ್ಲಿ ಮುಖ್ಯ ಪಾತ್ರ ಮಾಡಿದರು.
5. ರಾಜಕುಮಾರರಿಗೆ ಯಾವ ಯಾವ ಗೌರವ ಪುರಸ್ಕಾರ ಲಭಿಸಿವೆ?

ಉ: 1975: ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, 1983: ಕರ್ನಾಟಕ ರತ್ನ ಪ್ರಶಸ್ತಿ. 1983 : ಪದ್ಮಭೂಷಣ, ಗುಬ್ಬಿ ವೀರಣ್ಣ ಪ್ರಶಸ್ತಿ ಇತ್ಯಾದಿ.

6. ಅಭಿಮಾನಿಗಳು ರಾಜಕುಮಾರರಿಗೆ ನೀಡಿರುವ ಬಿರುದುಗಳನ್ನು ಹೆಸರಿಸಿ.

ಉ: ಕಲಾಕೌಸ್ತುಭ, ಗಾನಗಂಧರ್ವ, ನಟಸಾರ್ವಭೌಮ, ಕಲಾಕೇಸರಿ, ಕನ್ನಡದ ಕಣ್ಮಣಿ, ವರನಟ, ರಸಿಕರ ರಾಜ.

**ಇ. ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ರಾಜಕುಮಾರ್ ಅವರ ಬಾಲ್ಯ ಜೀವನ ಹೇಗಿತ್ತು?

ಉ: ಮುತ್ತುರಾಜುವಿನ ಬಹುತೇಕ ಬಾಲ್ಯವು ದೊಡ್ಡ ಗಾಜನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಳೆಯಿತು. ತೀರಾ ಅಪರೂಪಕ್ಕೆ ನೋಡುತ್ತಿದ್ದ ದೊಡ್ಡ ಊರೆಂದರೆ ನಂಜನಗೂಡು. ಇನ್ನೂ ಅಪರೂಪಕ್ಕೆ ಮೈಸೂರಿನ ದರ್ಶನವೂ ಆಗುತ್ತಿತ್ತು. ಬಾಲ್ಯವು ಸಮೃದ್ಧವಾಗಿದ್ದಿತು. ಹಳ್ಳಿಯಲ್ಲಿ ಹುಟ್ಟಿದ ಯಾರಿಗೇ ಆದರೂ ಬಡತನ, ಹಸಿವು, ಜಗಳ, ಜಾತ್ರೆ, ಪೂಜೆ, ಉತ್ಸವ, ಹೊಲ, ತೋಟ, ಕಾಡು–ತೊರೆ, ಬಂಧು–ಬಳಗ, ತಾಯಿಯ ವಾತ್ಸಲ್ಯಧಾರೆ– ಇವೆಲ್ಲ ಸಹಜವಾಗಿ ಒದಗಿ ಬರುವ ಭಾಗ್ಯಗಳು. ಮುತ್ತುರಾಜನೂ ಇವೆಲ್ಲವನ್ನು ಅನುಭವಿಸಿ ಬಾಲ್ಯವನ್ನು ಹಸನಾಗಿಸಿಕೊಂಡ ಭಾಗ್ಯವಂತನೇ!

2. ಭಕ್ತಿ ಪ್ರಧಾನ ಚಿತ್ರಗಳಲ್ಲಿ ರಾಜಕುಮಾರ್ ನಿರ್ವಹಿಸಿದ ಪಾತ್ರಗಳಾವುವು?

ಉ: ಭಕ್ತವಿಜಯ, ಹರಿಭಕ್ತ, ಓಹಿಲೇಶ್ವರ, ಕೃಷ್ಣಗಾರುಡಿಗ, ಧರ್ಮವಿಜಯ, ದಶಾವತಾರ, ಶ್ರೀಶೈಲ ಮಹಾತ್ಮೆ, ಕಬೀರ್, ಭಕ್ತಚೇತ, ತುಕರಾಂ.

3. ಗಾಯನಕ್ಷೇತ್ರಕ್ಕೆ ರಾಜಕುಮಾರರ ಸೇವೆಯನ್ನು ವಿವರಿಸಿ.

ಉ: ರಾಜಕುಮಾರ್ ಅವರು ಶ್ರೇಷ್ಠ ನಟರಾಗಿರುವಂತೆ ಶ್ರೇಷ್ಠ ಗಾಯಕರೂ ಆಗಿದ್ದಾರೆ. 'ಸಂಪತ್ತಿಗೆ ಸವಾಲ್' ಚಿತ್ರದ ಯಾರೇ ಕೂಗಾಡಲೀ....' ಎಂಬ ಹಾಡಿನೊಂದಿಗೆ ಗಾಯಕರಾಗಿ ಪ್ರಸಿದ್ಧಿ ಪಡೆದರು. ಅದಕ್ಕೂ ಮೊದಲೇ ಎರಡು ಸಿನಿಮಾಗಳಿಗೆ ಹಾಡಿದ್ದರು. ಮುಂದೆ ಇವರು ತಮ್ಮ ಪಾತ್ರಗಳಿಗೆ ತಾವೇ ಗಾಯಕರಾಗಿಯೂ ಗುರುತಿಸಿಕೊಂಡರು. ಸಾವಿರಾರು ಚಿತ್ರಗೀತೆ, ಭಕ್ತಿಗೀತೆ, ಭಾವಗೀತೆಗಳನ್ನು ಹಾಡಿರುವ ಇವರಿಗೆ 'ಜೀವನಚೈತ್ರ' ಸಿನಿಮಾದ 'ನಾದಮಯ' ಎಂಬ ಹಾಡಿಗಾಗಿ 'ರಾಷ್ಟ್ರ ಪ್ರಶಸ್ತಿ'ಯನ್ನು ಮುಡಿಗೇರಿಸಿಕೊಂಡಿದ್ದಾರೆ.

4. ರಾಜಕುಮಾರ್ ಅವರು ಕನ್ನಡ ನಾಡು–ನುಡಿಗೆ ಸಲ್ಲಿಸಿದ ಸೇವೆ ಯಾವ ಬಗೆಯದು?

ಉ: . ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಆದ್ಯತೆ ನೀಡಬೇಕೆಂಬ ಆಶಯದ ಗೋಕಾಕ್ ಚಳುವಳಿಯನ್ನು ಮುಂಚೂಣಿಯಲ್ಲಿ ಮುನ್ನಡೆಸಿದವರು ರಾಜಕುಮಾರ್. ಅವರ ಕನ್ನಡದ ಪ್ರೀತಿ ಅನನ್ಯ, ಅದ್ವಿತೀಯವಾದದ್ದು. ಕನ್ನಡ ನಾಡು–ನುಡಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ.

5. ರಾಜಕುಮಾರ್ ಅವರು ಕನ್ನಡಿಗರಲ್ಲಿ ಮನೆಮಾತಾಗಿರುವುದರ ವೈಶಿಷ್ಟ್ಯವನ್ನು ತಿಳಿಸಿ.

ಉ: ನಾಯಕನಟರಾಗಿ ಖ್ಯಾತರಾಗಿದ್ದಾರೆ. ಪುನೀತ್ ರಾಜ್‌ಕುಮಾರ್ ಬಾಲ ನಟನಾಗಿ 'ಬೆಟ್ಟದ ಹೂ' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಗಳಿಸಿದ್ದಾರೆ. ಇವರೊಂದಿಗೆ ಮೂರನೇ ತಲೆಮಾರಿನ ನಟ–ನಟಿಯರೂ ಪ್ರಸಿದ್ಧಿಗೆ ಬರುತ್ತಿದ್ದಾರೆ. ರಾಜಕುಮಾರ್ ಸ್ವತಃ ಗಾಯನ ರಸಸಂಜೆಗಳನ್ನು ನಡೆಸಿ ಅನೇಕ ಸಂಘ–ಸಂಸ್ಥೆಗಳಿಗೆ, ಶಿಕ್ಷಣ ಕ್ಷೇತ್ರಗಳಿಗೆ ರಂಗಭೂಮಿಯ ಕಲಾವಿದ, ತಂತ್ರಜ್ಞರಿಗೆ ಅಗತ್ಯಬಿದ್ದಾಗ ನೆರವು ನೀಡಿದ್ದಾರೆ. ಬರಪರಿಹಾರ ನಿಧಿ, ನೆರೆ ಸಂತ್ರಸ್ತರಿಗೆ, ಮುಖ್ಯಮಂತ್ರಿ ನಿಧಿ ಹಲವು ಬಾರಿ ಹಣಕಾಸಿನ ಸಂಗ್ರಹ ಮಾಡಿಕೊಟ್ಟಿದ್ದರು. ಇದರಿಂದ ಅವರೊಬ್ಬ ಅಪ್ಪಟ ಹೃದಯ ಶ್ರೀಮಂತಿಕೆಯ ಕಲಾವಿದರಾಗಿದ್ದರೆಂಬುದು ವೇದ್ಯವಾಗುತ್ತದೆ.

**ಈ. ಸಂದರ್ಭ ಸೂಚಿಸಿ:**

1. ಇಳೆಗೆ ಮಳೆಯನ್ನು ಕರೆತಂದ ಕಂದ.

ಉ: **ವಾಕ್ಯ:** ಇಳೆಗೆ ಮಳೆಯನ್ನು ಕರೆತಂದ ಕಂದ.

**ಆಯ್ಕೆ:** ಈ ವಾಕ್ಯವನ್ನು ಡಾ. ರಾಜಕುಮಾರ್‌ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಡಾ. ರಾಜ ಕುಮಾರ್ ಜನಿಸಿದಾಗ ಜೋರಾಗಿ ಸುರಿದ ಮಳೆಯಿಂದ ಜನರು ಹೇಳಿದ್ದು

2. ಅಪರೂಪಕ್ಕೆ ಮೈಸೂರಿನ ದರ್ಶನವೂ ಆಗುತ್ತಿತ್ತು.

ಉ: **ವಾಕ್ಯ:** ಅಪರೂಪಕ್ಕೆ ಮೈಸೂರಿನ ದರ್ಶನವೂ ಆಗುತ್ತಿತ್ತು.

**ಆಯ್ಕೆ:** ಈ ವಾಕ್ಯವನ್ನು ಡಾ. ರಾಜಕುಮಾರ್‌ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಡಾ. ರಾಜಕುಮಾರ್ ನಂಜನಗೂಡು ಮತ್ತು ಮೈಸೂರನ್ನು ಅಪರೂಪಕ್ಕೆ ನೋಡಲು ಹೋಗುತ್ತಿದ್ದರಿಂದ

3. ಬಾಲ್ಯವನ್ನು ಹಸನಾಗಿಸಿಕೊಂಡ ಭಾಗ್ಯವಂತನೇ!

**ವಾಕ್ಯ:** ಬಾಲ್ಯವನ್ನು ಹಸನಾಗಿಸಿಕೊಂಡ ಭಾಗ್ಯವಂತನೇ!

**ಆಯ್ಕೆ:** ಈ ವಾಕ್ಯವನ್ನು ಡಾ. ರಾಜಕುಮಾರ್‌ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಡಾ. ರಾಜಕುಮಾರ್ ಬಾಲ್ಯದಲ್ಲಿ ಎಲಾ ತರಹದ ಅನುಭವ ಪಡೆದ ಸಂದರ್ಭ.

4. ಮುತ್ತುರಾಜನ ಹೆಸರನ್ನು 'ರಾಜಕುಮಾರ್' ಎಂದು ಬದಲಾಯಿಸಿದರು.

**ವಾಕ್ಯ:** ಮುತ್ತುರಾಜನ ಹೆಸರನ್ನು 'ರಾಜಕುಮಾರ್' ಎಂದು ಬದಲಾಯಿಸಿದರು.

**ಆಯ್ಕೆ:** ಈ ವಾಕ್ಯವನ್ನು ಡಾ. ರಾಜಕುಮಾರ್‌ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಸಂದರ್ಭ :** ಬೇಡರ ಕಣ್ಣಪ್ಪ ಚಿತ್ರದ ನಿರ್ದೇಶಕರಾದ ಎಚ್.ಎಲ್.ಎನ್. ಸಿಂಹ ಅವರಿ ಇವರ ಹೆಸರನ್ನು ಬದಲಾಯಿಸಿದರು..
5. ಅವರೊಬ್ಬ ಅಪ್ಪಟ ಹೃದಯ ಶ್ರೀಮಂತಿಕೆಯ ಕಲಾವಿದ.
**ವಾಕ್ಯ:** ಅವರೊಬ್ಬ ಅಪ್ಪಟ ಹೃದಯ ಶ್ರೀಮಂತಿಕೆಯ ಕಲಾವಿದ
**ಆಯ್ಕೆ:** ಈ ವಾಕ್ಯವನ್ನು ಡಾ. ರಾಜಕುಮಾರ್‌ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.
**ಸಂದರ್ಭ :** ರಾಜಕುಮಾರ್ ಅವರು ನೆರೆ ಪರಿಹಾರ, ಬರ ಪರಿಹಾರಕ್ಕಾಗಿ ನೆರವಿ ನಿಡಿದ್ದರಿಂದ

**ಭಾಷಾ ಅಭ್ಯಾಸ**

**ಅ. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ರಾಜಕುಮಾರ್ ಅವರಿಗೆ ತಂದೆ ತಾಯಿ __________ ಎಂದು ನಾಮಕರಣ ಮಾಡಿದ್ದರು. ಉ:ಮುತ್ತುರಾಜ
2. ____________ ಯು ಮುತ್ತುರಾಜನ ಮೊದಲ ಆಡುಂಬೊಲ. ಉ: ರಂಗಭೂಮಿ
3. ರಾಜಕುಮಾರ್ ನಾಯಕನಟರಾಗಿ ಅಭಿನಯಿಸಿದ ಮೊದಲ ಚಿತ್ರ ____________ ಉ: ಬೇಡರ ಕಣ್ಣಪ್ಪ
4. __________ ಚಿತ್ರದ ಗಾಯನಕ್ಕೆ ರಾಜಕುಮಾರ್ ಅವರಿಗೆ ರಾಷ್ಟ್ರಪ್ರಶಸ್ತಿ ಲಭಿಸಿತು. ಉ: ಜೀವನ ಚೈತ್ರ
5. ರಾಜಕುಮಾರ್ ಅವರಿಗೆ 'ಕರ್ನಾಟಕ ರತ್ನ' ಪುರಸ್ಕಾರ ದೊರೆತದ್ದು _______ರಲ್ಲಿ. ಉ: 1992

**ಆ. ಹೊಂದಿಸಿ ಬರೆಯಿರಿ.**

| 'ಅ' | 'ಬ' | ಉತ್ತರ |
|---|---|---|
| 1. ಮೊದಲ ಹೆಸರು | ಜೀವನಚೈತ್ರ | ಮುತ್ತುರಾಜ |
| 2. ಮೊದಲ ಚಿತ್ರ | ರಾಜಕುಮಾರ್ | ಬೇಡರ ಕಣ್ಣಪ್ಪ |
| 3. ರಾಷ್ಟ್ರಪ್ರಶಸ್ತಿ | ಸಂಪತ್ತಿಗೆ ಸವಾಲ್ | ಜೀವನ ಚೈತ್ರ |
| 4. ಬದಲಾದ ಹೆಸರು | ಮುತ್ತುರಾಜ | ರಾಜಕುಮಾರ್ |
| | ಬೇಡರ ಕಣ್ಣಪ್ಪ | |

## ಪದ್ಯ ಭಾಗ

### 1. ಬೇಸಿಗೆ –ಬಿ.ಆರ್.ಲಕ್ಷ್ಮಣರಾವ್

### ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

1. ಸೂರ್ಯ ಏಕೆ ದುಡಿಯುತ್ತಿದ್ದಾನೆ?
ಉ: ಮೋಡ ಕೂಡಿಸಲು, ಇಳೆಗೆ ಮಳೆ ತರಲು ಸೂರ್ಯ ದುಡಿಯುತ್ತಿದ್ದಾನೆ.
2. ಭೂಮಿಯ ಪೋಷಕ ಯಾರು?
ಉ: ಭೂಮಿಯ ಪೋಷಕ ಸೂರ್ಯ.
3. ಸೂರ್ಯ ಮರೆಯದೆ ಯಾವ ಕರ್ತವ್ಯ ಮಾಡುವನು?
ಉ: ಸೂರ್ಯ ಮರೆಯದೇ ಬೆಳಕ ನೀಡಿ ಬಿಸಿಯ ನೀಡುವ ಕರ್ತವ್ಯ ಮಾಡುವನು.
4. ಬಿರು ಬಿಸಿಲಿಗೆ ಯಾವುವು ಕಂಗಾಲಾಗಿಲ್ಲ?
ಉ: ಮರ ಗಿಡ ಪೊದೆ ಬಳ್ಳಿ ಬಿಸಿಲಿಗೆ ಕಂಗಾಲಾಗಿಲ್ಲ.
5. ಸೂರ್ಯನಿಂದ ಮಕ್ಕಳು ಕಲಿಯಬೇಕಾದ್ದೇನು?
ಉ: ಮಕ್ಕಳು ಸುರ್ಯನಿಂದ ಕಷ್ಟಗಳಿಗೆ ಅಂಜದೇ ತಮ್ಮ ಕರ್ತವ್ಯ ಮರೆಯದೇ ಇರುವುದನ್ನು ಕಲಿಬೇಕು.

**ಆ. ಕೆಳಗಿನ ಪದಗಳಿಗೆ ತಲಾ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

1. ಸೂರ್ಯ = ರವಿ, ಭಾಸ್ಕರ
2. ಇಳೆ = ಭುಮಿ, ನೆಲ
3. ಪ್ರಕೃತಿ = ಪರಿಸರ, ನಿಸರ್ಗ
4. ಸಂಭ್ರಮ = ಸಂತೋಷ, ಖುಷಿ

**ಇ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ.**

1) ಪೋಷಕರು : ನಮ್ಮ ಪೋಷಕರು ನಮಗಾಗಿ ದುಡಿಯುವರು.
2) ಕರ್ತವ್ಯ : ನಾವು ಮರೆಯದೇ ನಮ್ಮ ಕರ್ತವ್ಯ ಮಾಡಬೇಕು.
3) ಸಂಭ್ರಮ : ನಾವು ಹಬ್ಬದಲ್ಲಿ ತುಂಬಾ ಸಂಭ್ರಮ ಪಡುತ್ತೇವೆ.
4) ಧನ್ಯತೆ : ಭಾರತ ಮಾತೆಯ ರಕ್ಕಣೆಗೆ ನಮ್ಮ ಪ್ರಾಣ ನೀಡಿದಾಗ ನಾವು ಧನ್ಯತೆ ಗಳಿಸುತ್ತೇವೆ.

**ಊ. ಈ ಪದಗಳಲ್ಲಿರುವ ಅಕ್ಷರಗಳನ್ನು ಬಿಡಿಸಿ ಬರೆಯಿರಿ.**

**ಉದಾ:** ಸಹಾಯ: ಸ್+ಅ, ಹ್+ಆ, ಯ್+ಅ.

1. ಆಭರಣ: ಆ, ಭ್+ಅ, ರ್+ಅ, ಣ್+ಅ
2. ಅವಲಕ್ಕಿ: ಅ, ವ್+ಅ, ಲ್+ಅ, ಕ್+ಕ್+ಇ
3. ಸಂಭ್ರಮ: ಸ್+ಅಂ, ಭ್+ರ್+ಅ. ಮ್+ಅ
4. ಪರಮಾಶ್ಚರ್ಯ: ಪ್+ಅ, ರ್+ಅ, ಮ್+ಆ, ಶ್+ಚ್+ಅ, ರ್+ಯ

## 2. ಮಂಗಳ ಗ್ರಹದಲ್ಲಿ ಪುಟ್ಟಿ –ಸಿ. ಎಂ. ಗೋವಿಂದರೆಡ್ಡಿ

### ಅಭ್ಯಾಸಗಳು

**ಅ. ಬಿಟ್ಟ ಸ್ಥಳವನ್ನು ತುಂಬಿರಿ.**

1. ಒಂದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ____________ಬಂದಿತ್ತು. ಉ: ರೆಕ್ಕೆಯು
2. ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ ____________ಸೇರಿದಳು. ಉ: ಮಡಿಲನು
3. ಪುಟ್ಟಿಯೇ ನಮ್ಮೀ ಮಂಗಳಗ್ರಹದ ದುರಂತ ____________ಕೇಳಿ ತಿಳಿ. ಉ: ಕಥೆಯನು
4. ಹಸಿರನು ಅಳಿಸದೆ ಗಿಡಮರ ಬೆಳೆಸಿ ಉಳಿಸುವೆವೆಂದಳು ಈ ________ ಉ: ಧರೆಯ

**ಆ. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?

ಉ: ಪುಟ್ಟಿಗೆ ಹಕ್ಕಿಯ ಹಾಗೆ ಹಾರುವ ಮನಸ್ಸಿತ್ತು.

2. ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

ಉ: ಮಂಗಳ ಗ್ರಹವನ್ನು ಸೇರಿದಳು.

3. ಪುಟ್ಟಿ ಯೋಗಿಗೆ ಏನೆಂದು ಕೇಳಿದಳು?

ಉ: ಪುಟ್ಟಿ ಯೋಗಿಗೆ ನೀನು ಹೇಗೆ ಇಲ್ಲಿಗೆ ಬಂದೆ ಎಂದು ಕೇಳಿದಳು.

4. ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು?

ಉ: ಆಗಿನ ಜನತೆಯು ನಾಡನು ಕಟ್ಟಲು ಮರಗಳ ಕಡಿಯಲು ಬಂತು ಬರ.

5. ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?

ಉ: ಹಸಿರನು ಉಳಿಸಲು ಬೇಡಿದಳು.

**ಇ. ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

1. ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ? ಇದು ಕಷ್ಟ.

2. ಮಳೆ ಬೆಳೆ ಕಾಣದೆ ಜೀವಿಯು ಅಳಿದು
ಬಂದಿತು ನಮಗೆ ಇಂಥ ಸ್ಥಿತಿ
'ನಿಮ್ಮ ಭೂಮಿಯಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ'

**ಈ. ಸಿ.ಎಂ.ಗೋವಿಂದರೆಡ್ಡಿಯವರ ಸ್ಥಳ, ಕಾಲ, ಕೃತಿಗಳ ವಿವರ ತಿಳಿಸಿರಿ.**

ಉ: ಸ್ಥಳ : ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಚೆನ್ನಿಗರಾಯ ಪುರ.

ಕಾಲ: 11 ನೇ ಆಗಸ್ಟ್ 1958

ಕೃತಿಗಳು : ಬಣ್ಣದ ಚಿಟ್ಟೆ, ಮಕ್ಕಳ ಮಂದಾರ, ಪದ್ಯ ಹೇಳುವ ಮರ

**ಉ. ನಾಮಪದ, ನಾಮಪ್ರಕೃತಿ, ಮತ್ತು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.**

1. ಗಗನ + ಅನ್ನು = ಗಗನವನ್ನು
2. ಶಾಲೆ + ಇಂದ = ಶಾಲೆಯಿಂದ

**ಊ. ಕೊಟ್ಟಿರುವ ವಾಕ್ಯಗಳಲ್ಲಿರುವ ಗುಣವಾಚಕ(ವಿಶೇಷಣ)ಗಳನ್ನು ಗುರುತಿಸಿರಿ.**

ಉದಾ: ವಿವೇಕನಿಗೆ ಅಪಾರ ಬುದ್ಧಿವಂತಿಕೆಯಿದೆ. – ಅಪಾರ

1. ರಫೀಕ್‌ನದು ದೊಡ್ಡಮನೆ. ______________________ ಉ: ದೊಡ್ಡ
2. ಅವಳಿಗೆ ಹಸಿರು ಬಣ್ಣ ಇಷ್ಟ. ______________________ ಉ: ಹಸಿರು
3. ಪುಟ್ಟಿಯು ಕಂಡಳು ಕೆಂಪು ಬಂಡೆಯನು. ______________________ ಉ: ಕೆಂಪು

**ಋ. ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ.**

1. ಡೇವಿಡ್‌ನ ಊರಿನಲ್ಲಿ ನೂರು ಹಸುಗಳಿವೆ. ______________________ ಉ: ನೂರು
2. ಪೂರ್ಣಚಂದ್ರನು ಬೆಳಿಗ್ಗೆ ಐದು ಗಂಟೆಗೆ ಏಳುತ್ತಾನೆ. ____________________ ಉ: ಐದು
3. ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆಯು ಬಂದಿತ್ತು. __________________ ಉ: ಒಂದು

**ಪ್ರಶ್ನೆಗಳು:**

1. ಡಾರ್ವಿನ್ನರು ಹೊಸ ಕೀಟವನ್ನು 'ಹಮ್‌ಬಗ್' ಎಂದು ಏಕೆ ಕರೆದರು?

ಉ: ಆ ಕೀಟ ಹಮ್ ಎಂದರೆ ಗುಂಯ್‌ಗುಡುತ್ತಿತ್ತು. ಹಾಗಾಗಿ ಹಮ್ ಬಗ್ ಎಮದರು

2. ಮಕ್ಕಳು ಚಿಟ್ಟೆಯ ರೆಕ್ಕೆಯನ್ನು ಯಾವುದಕ್ಕೆ ಅಂಟಿಸಿದರು?

ಉ: ಜೀರುಂಡೆಗೆ ಅಚಿಟಿಸಿದರು.

## 3. ನೀ ಹೋದ ಮರುದಿನ – ಚೆನ್ನಣ್ಣ ವಾಲೀಕಾರ

### ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಯಾರು ಹೋದ ಮೇಲೆ ನಮ್ಮ ಬದುಕು ಮೊದಲಿನಂತೆ ಆಗಿದೆ?

ಉ: ಡಾ. ಬಾಬಾ ಸಾಹೇಬ ಅಂಬೇಡ್ಕರ್

2. ಯಾವುದು ಪ್ರತಿನಿತ್ಯ ತಪ್ಪಿಲ್ಲ ನಮಗೆ?

ಉ: ಪ್ರತಿನಿತ್ಯ ಎದ್ದಾಗ ನಮಸುದ್ದಿ ಸಂಭ್ರಮವು ಕೇಕುವುದು ತಪ್ಪಿಲ್ಲ ನಮಗ.

3. ಏನನ್ನು ಕಳೆದುಕೊಂಡ ಬರಡು ಗಿಡ ನಾವು?

ಉ: ಕೈ ಕಾಲು ಕಿವಿ ಮೂಗು ಮೈ ಮನಸು ತಲೆ ಕಣ್ಣು ಕಳೆದುಕೊಂಡ ಬರಡು ಗಿಡ ನಾವು.

4. ತಾಳಿ ತಾಳಿ ಒಮ್ಮೆ ಏನಾಗಿ ಕುಟುಕುವನು?

ಉ: ಚೇಳಾಗಿ ಕುಟುಕುವನು.

5. ಈ ಪದ್ಯವನ್ನು ಬರೆದವರು ಯಾರು?

ಉ: ಚೆನ್ನನ್ನ ವಾಲೀಕಾರ

**ಆ. ಸ್ವಂತವಾಕ್ಯದಲ್ಲಿ ಬಳಸಿರಿ.**

1. ಸ್ವಾತಂತ್ರ್ಯ : ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು.
2. ಬದುಕು : ನಾವು ಚೆನ್ನಾಗಿ ಬದುಕಿ ಸಾಧನೆ ಮಾಡಬೇಕು.
3. ಸಂಭ್ರಮ : ಶಾಲಾ ಕಲಿಕಾ ಮೇಳದಲ್ಲಿ ನಾವು ಸಂಭ್ರಮ ಪಟ್ಟೆವು.
4. ಕುಟುಕು: ಕಂದಕೂರಿನ ಚೇಳಿನ ಜಾತ್ರೆಯಲ್ಲಿ ನಮ್ಮ ಶಿಕ್ಷಕರಿಗೆ ಚೇಳು ಕುಟುಕಿತು.

**ಈ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

ನೀ ಹೋದ ಮರುದಿನ ಮೊದಲಂಗೆ ನಮ್ ಬದುಕು
ಹಾಗ್ಯಾದೋ ಬಾಬಾ ಸಾಹೇಬ
ನಿನ್ನಂಗ ದುಡಿದವರು ಕಳಕಳಿಯ ಪಡುವವರು
ಇನ್ನುತನ ಬರಲಿಲ್ಲ ಒಬ್ಬ ॥ ನೀ ಹೋದ ॥

ಕೈಕಾಲು ಕಿವಿ ಮೂಗು ಮೈಮನಸು ತಲೆ ಕಣ್ಣು
ಕಳಕೊಂಡ ಬರಡು ಗಿಡ ನಾವು ॥
ಮೈ ತುಂಬಾ ಮನತುಂಬಾ ಸಿಕ್ಕವರ ಮುಖಮುದ್ರೆ
ಚೀರಾಟ ಹಾರಾಟ ಸಾವೋ ॥ ನೀ ಹೋದ ॥

## 4. ಮಗು ಮತ್ತು ಹಣ್ಣುಗಳು – ಎಚ್. ಎಸ್. ಶಿವಪ್ರಕಾಶ್

### ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಕವಿಯ ಪ್ರಕಾರ ಮಗು ಏನಾಗಬೇಕು?

ಉ: ಕವಿಯ ಪ್ರಕಾರ ಮಗು ಹಣ್ಣಾಗಬೇಕು.

2. ಮಗು ಯಾವ ಹಣ್ಣಿನ ಹಾಗೆ ಬಾಗಬೇಕು?

ಉ: ಮಗು ಬಾಳೇ ಹಣ್ಣಿನಂತೆ ಬಾಗಬೇಕು.
3. ಯಾವ ಹಣ್ಣಿನಂತೆ ಕುಗ್ಗಬೇಕು ಎಂದು ಕವಿಗಳು ಹೇಳುತ್ತಾರೆ?
ಉ: ನಿಂಬೆ ಹಣ್ಣಿನಂತೆ ಕುಗ್ಗಬೇಕು.
4. ಅಪರೂಪವಾದ ಹಣ್ಣು ಯಾವುದು?
ಉ: ಅಪರೂಪವಾದ ಹಣ್ಣು ಅಂಜೂರ

5. ಕಮರಿರುವ ಕಣ್ಣುಗಳಿಗೆ ಹೇಗೆ ಕಾಣಬೇಕು?
ಉ: ದಳದಳ ಕೊಯ್ದು ಅರಳಿಸಿದ ದಾಳಿಂಬೆಯಂತೆ ಕಾಣಬೇಕು.

**ಆ. ಬಿಟ್ಟಸ್ಥಳ ತುಂಬಿರಿ.**

1. ಥಳ ಥಳ ಕೆಂಡ ________ ಮಣಿ ಮಣಿ. ಉ: ಬಣ್ಣ
2. ಹಬ್ಬಿಕೋ __________ ಬಳ್ಳಿಯ ಹಾಗೆ. ಉ: ದ್ರಾಕ್ಷಿ
3. ಎಲ್ಲರಿಗೂ ___________ ಎಲಚಿಯಾಗು. ಉ: ದಕ್ಕುವ
4. ಬೆಲೆಯ _________ ಯಾನ ಹೊರಡದಿರು. ಉ: ರಾಕೆಟ್ಟು
5. ಸರಿಗಾತ್ರವಾಗಿ ಸಮನಿಸಲಿ _______ ಹಾಗೆ. ಉ: ನಿನ್ನತನ

**ಇ. ಈ ಪದಗಳನ್ನು ಬಿಡಿಸಿ ಬರೆಯಿರಿ.**

1. ಹಣ್ಣಿನಂಗಡಿ : ಹಣ್ಣಿನ+ಅಂಗಡಿ
2. ಕಣ್ಣರಳಿಸು : ಕಣ್ಣನ್ನು+ಅರಳಿಸು.
3. ತುಂಟರೆಸೆಯುವ : ತುಂಟರು+ಎಸೆಯುವ
4. ಹುಳಿಗಟ್ಟುವುದು : ಹುಳಿ+ಕಟ್ಟುವುದು
5. ನಿನ್ನೊಳಗೆ : ನಿನ್ನ+ಒಳಗೆ
6. ಅಪರೂಪವಾಗು : ಅಪರೂಪ+ಆಗು

**ಈ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಕೊಬ್ಬಿದರೆ ಚಕೋತನೆಯ ಹಾಗೆ
ಕುಗ್ಗಿದರೆ ನಿಂಬೆ ಹಣ್ಣಿನ ಹಾಗೆ
ಹುಳಿಗಟ್ಟುವುದು ನಿನ್ನೊಳಗೆ
ಸರಿಗಾತ್ರವಾಗಿ ಸಮನಿಸಲಿ ನಿನ್ನತನ ॥4॥
ಕಿತ್ತಲೆಯ ಹಾಗೆ, ಮೋಸಂಬಿ ಹಾಗೆ
ರಸಪೂರಿ ಮಾವಿನ ಹಣ್ಣಿನಂತೆ

ಪೂರಕ ಪಾಠಗಳು

## 1. ನಾಟ್ಯಕಲಾ ದುರಂಧರ ಮಹಮ್ಮದ್ ಪೀರ್

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

1. ಕನ್ನಡ ರಾಘವ ಎಂದು ಪ್ರಸಿದ್ಧರಾದವರು ಯಾರು?
ಉ : ಮಹಮ್ಮದ್ ಪೀರ್
2. ಮಹಮ್ಮದ್ ಪೀರ್ ಅವರು ಯಾರ ಆಶ್ರಯದಲ್ಲಿ ಬೆಳೆದರು?
ಉ: ಸೋದರಮಾವನ ಆಶ್ರಯದಲ್ಲಿ ಬೆಳೆದರು.
3. ಮಹಮ್ಮದ್ ಪೀರ್ ಅವರಿಗೆ ನಾಟಕದ ಅಭಿರುಚಿ ಯಾವಾಗ ಹತ್ತಿತು?
ಉ:ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಓದುತ್ತಿರುವಾಗಲೇ ನಾಟಕದ ಅಭಿರುಚಿ ಹತ್ತಿತು.
4. ಮಹಮ್ಮದ್ ಪೀರ್ ಅವರ ಯಾವ ಪಾತ್ರಗಳು ವಿಶೇಷ ಖ್ಯಾತಿಗೆ ಪಾತ್ರವಾಗಿವೆ?
ಉ: ಸಂಸಾರ ನೌಕೆ ಚಿತ್ರದ ಸುಂದರ ಪಾತ್ರ & ಷಾಹಜಾನ್ ನಾಟಕದ ದಾರಾ & ಗೌತಮಬುದ್ಧದ ಗೌತಮ ಪಾತ್ರಗಳು ಖ್ಯಾತಿ ಪಡೆದಿವಿಚೆ.
5. ಮಹಮ್ಮದ್ ಪೀರ್‌ರವರ ತಂದೆತಾಯಿ ಹೆಸರೇನು?
ಉ: ತಂದೆ ಪೈಲ್ವಾನ್ ತಾಯಿ ಮುಬಾರಕ್ಕಿ.

## 2. ಅವ್ವ – ಲಲಿತಾ ಕೆ. ಹೊಸಪ್ಯಾಟಿ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

1. ಕವಯಿತ್ರಿಯು ತಾಯಿಯ ಪಾದಕ್ಕೆ ಏನು ತರುತ್ತಾಳೆ?

ಉ: ಬೊಗಸೆ ತುಂಬ ಹೂವ ತರುತ್ತಾಳೆ.

2. ಜಗತ್ತಿನಲ್ಲಿ ಮಿಗಿಲಾದುದು ಯಾವುದು?

ಉ: ಅವ್ವ

3. ತಾಯಿ ಮಗುವಿಗೆ ಏನನ್ನು ಕಲಿಸುತ್ತಾಳೆ?

ಉ: ವಿದ್ಯೆ ಬುದ್ದಿ ಕಲಿಸುತ್ಥಾಳೆ.

4. ಮಗು ಬಿದ್ದಾಗ ತಾಯಿ ಹೇಗೆ ರಮಿಸುತ್ತಾಳೆ?

ಉ: ಕಣ್ಣ ನೀರ ಒರೆಸಿ ಎದೆಗವಚಿ ರಮಿಸುತ್ತಾಳೇ.

5. ತಾಯಿ ಮಗುವಿಗೆ ಏನನ್ನು ಕುಡಿಸುತ್ತಾಳೆ?

ಉ: ಹಾಲನ್ನು ಕುಡಿಸುತ್ತಾಳೆ.

## 3. ಪುಟ್ಟಲಕ್ಷ್ಮಿ ಕತೆ – ಚ. ಹ. ರಘುನಾಥ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ನಮ್ಮ ತಂದೆ–ತಾಯಿ ಬಂಧು ಬಳಗ ಯಾರು?

ಉ: ಸತ್ಯವೇ ನಮ್ಮ ತಂದೆ ತಾಯಿ ಬಂಧುಬಳಗ.

2. ಈ ಕತೆಯಲ್ಲಿ ಬರುವ ದೆವ್ವದ ಹೆಸರೇನು?

ಉ: ದುಬಾಕ್ ದೆವ್ವ.

3. ದೆವ್ವ ಹೇಳುತ್ತಿದ್ದ ಮಂತ್ರ ಯಾವುದು?

ಸುಂಯ್ ಟುಪಾಕ್

4. ಪುಟ್ಟಲಕ್ಷ್ಮಿ ದುಬಾಕು ದೆವ್ವಕ್ಕೆ ಏನೆಂದು ಶಾಪ ಹಾಕಿದಳು?

ಮಕ್ಕಳ ತಿಂಡಿಯನ್ನು ಕದ್ದು ತಿಮದ ನೀನು ಯಂತ್ರವಾಗಿ ಬದಲಾಗು ಎಂಬ ಶಾಪ ಹಾಕಿದಳು.

5. ದುಬಾಕು ದೆವ್ವ ಯಾವ ಯಂತ್ರವಾಗಿ ಬದಲಾಯಿತು?

ಉ: ಜೆಸಿಬಿ ಯಂತ್ರವಾಗಿ ಬದಲಾಯಿತು.

## ದ್ವಿತೀಯ ಸೆಮಿಸ್ಟರ್ ಪಠ್ಯಕ್ರಮ

### 5. ಧನ್ಯವಾದ ಹೇಳಿದ ಕೊಕ್ಕರೆ



ಲೇಖಕಿ : ಡಾ. ಅನುಪಮಾ ನಿರಂಜನ
(ತಂದೆ-ತಾಯಿಕೊಟ್ಟ ಹೆಸರು ವೆಂಕಟಲಕ್ಷ್ಮಿ)

ಜನನ : 1934ರ ಮೇ 17, ತೀರ್ಥಹಳ್ಳಿ

ವೃತ್ತಿ : ವೈದ್ಯರು

ಕೃತಿಗಳು

'ಕೇಳು ಕಿಶೋರಿ' ಹಾಗೂ 'ತಾಯಿ ಮಗು' 'ಅನಂತಗೀತ', 'ಶ್ವೇತಾಂಬರಿ','ಹಿಮದ ಹೂ','ಆಳ', 'ದಿಟ್ಟೆ' ಪ್ರಶಸ್ತಿಗಳು : ಸಾಹಿತ್ಯ ಅಕಾಡೆಮಿ ಪುರಸ್ಕಾರ, ಸೋವಿಯತ್ ಲ್ಯಾಂಡ್ ನೆಹರು ಪ್ರಸಸ್ತಿ,
ಕಾಸರಗೋಡು ಮಹಿಳಾ ಸಮ್ಮೇಳನದ ಅಧ್ಯಕ್ಷತೆ,
ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.



### 5. ಹೊಸ ಬಾಳು

ಕವಿ : ಬಿ.ಎಸ್. ಕುರ್ಕಾಲ್

ಜನನ : 17-07-1932, ಉಡುಪಿಯ ಪಾಜಕ

ತಂದೆ : ಕುರ್ಕಾಲು ಗಣಪಯ್ಯ ಶೆಟ್ಟಿ, ತಾಯಿ : ಲಕ್ಷ್ಮಿ ಶೆಡ್ತಿ

ವಾಸಸ್ಥಳ : ಮುಂಬಯಿ

ವೃತ್ತಿ : ಶಿಕ್ಷಕರು

ಪ್ರವೃತ್ತಿ : ನಟ, ನಾಟಕಕಾರ, ನಿರ್ದೇಶಕ, ಕವಿ, ಪತ್ರಿಕಾ ಸಂಪಾದಕ, ಅಂಕಣಕಾರ, ಯಕ್ಷಗಾನ ಅರ್ಥದಾರಿ

ಕೃತಿಗಳು

ಕವನ ಸಂಕಲನಗಳು: ನನ್ನ ನಿನ್ನ ಅಂತರಂಗ, ಶ್ರಾವಣಾ ಲಹರಿ, ಬರೆಯುವೆನು ನಿನಗಾಗಿ, ರಾಗ ರಶ್ಮಿ ಮುಂತಾದ 20ಕ್ಕೂ ಹೆಚ್ಚಿನ ಕೃತಿಗಳನನ್ನು ರಚಿಸಿದ್ದಾರೆ.

ಪ್ರಶಸ್ತಿಗಳು

ಕರ್ನಾಟಕ ಸಾಹಿತ್ಯ ಪರಿಷತ್ತು ಪ್ರಶಸ್ತಿ, ಮುಂಬಯಿ ಕರ್ನಾಟಕ ಸಂಘ ಪ್ರಶಸ್ತಿ

ಪ್ರಸ್ತುತ ಪದ್ಯವನ್ನು ಇವರ ಬರೆಯುವೆನು ನಿನಗಾಗಿ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.



### 6. ಗಂಗವ್ವ ತಾಯಿ

*ಕವಿ* : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

*ಜನನ* : 3.11.1939, ಧಾರವಾಡ ಜಿಲ್ಲೆಯ ಯಾದವಾಡ

*ತಂದೆ* : ಬಸೆಟಪ್ಪ, ತಾಯಿ : ಗಿರಿಜಾದೇವಿ

ಇವರು 60ಕ್ಕಿಂತ ಹೆಚ್ಚು ಕನ್ನಡ ಮತ್ತು 10ರಷ್ಟು ಹಿಂದೀ ಪುಸ್ತಕಗಳನ್ನು ರಚಿಸಿದ್ದಾರೆ.

*ಕವನ ಸಂಗ್ರಹಗಳು :* 'ನೀನಾ', 'ಔರಂಗಜೇಬ', 'ಪರದೇಸಿ ಹಾಡುಗಳು', 'ಅಯಸ್ಕಾಂತ', 'ಇಷ್ಟು ಹೇಳಿದ ಮೇಲೆ', 'ಅಪರಂಪಾರ'

*ಕಥಾಸಂಗ್ರಹಗಳು,:* 'ಮಾವ', 'ಹಕ್ಕಿಗಳು'

*ವಿಮರ್ಶಾಕೃತಿಗಳು,:* 'ಅನುಶೀಲನ', 'ರಂಗಾಯಣ', 'ಪರಿಬಾವನ', 'ವಿವೇಚನ' ಮುಂತಾದ

'ಆಷಾಢದ ಒಂದು ದಿನ', 'ಆಧೇಅಧೂರೇ', 'ಅಂಧಯುಗ', 'ಮುದ್ರಾರಾಕ್ಷಸ', 'ಶಸ್ತ್ರಸಂತಾನ', 'ಕೋರ್ಟ್ ಅನುವಾದ *ನಾಟಕಗಳು* : ಮಾರ್ಷಲ್', 'ಚೋರ ಚರಣದಾಸ', 'ಆಕಾಶಭೇರಿ', 'ಕಾಲ ಕೆಳಗಿನ ನೆಲ'

*ಪ್ರಶಸ್ತಿಗಳು:* 1996ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ 'ಗೌರವ ಫೆಲೊಶಿಪ್',
1998ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ,
ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ,
ಕೇಂದ್ರ ಸಾಹಿತ್ಯ ಅಕಾದೆಮಿಯ ಕಾರ್ಯಕಾರಿ ಸಮಿತಿ ಸದಸ್ಯ ಮತು
ತ್ರಕನ್ನಡ ಸಲಹಾ ಮಂಡಳಿಯ ಸಂಚಾಲಕರಾಗಿದ್ದರು.
ಪ್ರಸ್ತುತ 'ಗಂಗವ್ವ ತಾಯಿ' ಕವನವನ್ನು ಇವರ 'ನಿನ್ನ ಮರೆಯೂ ಮಾತು' ಎಂಬ
ಸಂಕಲನದಿಂದ ಆರಿಸಿಕೊಳ್ಳಲಾಗಿದೆ.



## 7. ಹೃದಯ ವಚನಗಳು

ವಚನಕಾರರು : ಡಾ. ಅಮೃತ ಸೋಮೇಶ್ವರ
ಜನನ : 27–09–1935, ದಕ್ಷಿಣ ಕನ್ನಡ ಜಿಲ್ಲೆಯ ಅಡ್ಕದಲ್ಲಿ
ವೃತ್ತಿ : ಪ್ರಾಧ್ಯಾಪಕರು
ಕವನ ಸಂಕಲನಗಳು: ಆಡುಂಬೊಲ. ಉಪ್ಪುಗಾಳಿ, ಹೃದಯ ವಚನಗಳು, ತಂಬಿಲ, ರಂಗಿತ ಕೃತಿಗಳು : ಎಲೆಗಳು, ರುದ್ರಶಿಲೆ ಸಾಕ್ಷಿ, ವನಮಾಲೆ, ಭಗವತಿ ಆರಾಧನೆ, ಮಲಯಾಳಿ ನಿಘಂಟು
ಪ್ರಶಸ್ತಿಗಳು : ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ತುಳು ಸಾಹಿತ್ಯ ಅಕಾಡೆಮಿಗಳ ಗೌರವ ಪ್ರಶಸ್ತಿ,
ಕರ್ನಾಟಕರಾಜ್ಯೋತ್ಸವ ಪ್ರಶಸ್ತಿ
ಪ್ರಸ್ತುತ ವಚನವನ್ನು ಅಮೃತಸೋಮೇಶ್ವರ ಅವರ 'ಹೃದಯ ವಚನಗಳು' ಎಂಬ ಸಂಕಲನದಿಂದ ಆರಿಸಲಾಗಿದೆ.



## 8. ಕಿತ್ತೂರ ಕೇಸರಿ

ಕವಿ : ಪರಗೊಂಡ ಗುರುಪಾದಪ್ಪ ಸಿದ್ದಾಪುರ
ಕಾವ್ಯನಾಮ : ಪ.ಗು.ಸಿದ್ದಾಪುರ.
ಜನನ : 01–06–1958, ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯ ದಾಶಾಳ
ತಂದೆ : ಗುರುಪಾದಪ್ಪ, ತಾಯಿ : ಯಮುನಾಬಾಯಿ.
ವಿದ್ಯಾಭ್ಯಾಸ : ಎಂ.ಎ, ಎ.ಎಂ.(ಆರ್ಟ್ ಮಾಸ್ಟರ್) ಪದವಿ ಪಡೆದಿದ್ದು,
ವೃತ್ತಿ: ಬಸವನ ಬಾಗೇವಾಡಿಯ ಮುಳವಾಡ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರು
ಕನ್ನಡದಲ್ಲಿ ನೂರಾರು ಮಕ್ಕಳ ಕವಿತೆಗಳು, ಕಥೆಗಳನ್ನು ರಚಿಸಿದ್ದಾರೆ.
ಪ್ರಶಸ್ತಿ : ರಾಜ್ಯ ಉತಮ್ತ ಶಿಕ್ಷಕ ಪ್ರಶಸಿ್ತ–2010
ಇವರ 'ಮಕ್ಕಳ ನೂರಾರು ಕವಿತೆಗಳು' ಎಂಬ ಕೃತಿಯಿಂದ ಈ ಪದ್ಯವನ್ನು ಆರಿಸಿಕೊಳ್ಳಲಾಗಿದೆ.

## 3. ಪುಟ್ಟಲಕ್ಷ್ಮಿ ಕಥೆ

ಲೇಖಕ : ರಘುನಾಥ ಚನ್ನಿಗರಾಯಪ್ಪ
ಜನನ : 01.11.1974 ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಹರಳಾಪುರದಲ್ಲಿ ಜ
ತಂದೆ : ಚನ್ನಿಗರಾಯಪ್ಪ ಎಚ್.ಎನ್., ತಾಯಿ: ರತ್ನಮ್ಮ ಎನ್.
ವಿದ್ಯಾಭ್ಯಾಸ : ಕನ್ನಡ ಎಂ.ಎ., ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮ
ವೃತ್ತಿ : 'ಪ್ರಜಾವಾಣಿ' ಪತ್ರಿಕೆಯಲ್ಲಿ ಮುಖ್ಯ ಉಪ ಸಂಪಾದಕರು

### ಕೃತಿಗಳು :

'ಹೊಳೆಯಲ್ಲಿ ಹರಿದ ನೀರು' 'ಹೊರಗೂ ಮಳೆ ಒಳಗೂ ಮಳೆ' 'ರಾಗಿಮುದ್ದೆ' 'ಚಿಲ್ಲಾಪಿಲ್ಲಿ' 'ವ್ಯಂಗ್ಯಚಿತ್ರ ವಿಶ್ವರೂಪ' 'ಆರ್.ನಾಗೇಂದ್ರರಾವ್', 'ಡಾ.ದೇವಿ ಶೆಟ್ಟಿ', 'ಬಿಲ್‌ಗೇಟ್ಸ್', 'ಅಣ್ಣಾ ಹಜಾರೆ' 'ಸತಿ ಸುಲೋಚನಾ' (ಕನ್ನಡದ ಮೊದಲ ವಾಕ್ಚಿತ್ರದ ಕಥನ), 'ಚಂದನವನದ ಚಿನ್ನದಹೂಗಳು', 'ಪುಟ್ಟಲಕ್ಷ್ಮಿ ಕಥೆಗಳು'

### ಪ್ರಶಸ್ತಿಗಳು:

ಕನ್ನಡ ಸಾಹಿತ್ಯ ಪರಿಷತ್‌ನ 'ವಸುದೇವ ಭೂಪಾಲಂ' ದತ್ತಿನಿಧಿ ಬಹುಮಾನ, ವರ್ಧಮಾನ ಪ್ರಶಸ್ತಿ ಹಾಗೂ ಕೆ. ಸಾಂಬಶಿವಪ್ಪ ಸ್ಮಾರಕ ಪ್ರಶಸ್ತಿ. ದ.ರಾ.ಬೇಂದ್ರೆ ಟ್ರಸ್ಟ್‌ನ ಗ್ರಂಥ ಬಹುಮಾನ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಅರಳು ಪ್ರಶಸ್ತಿ ಹಾಗೂ ಕರ್ನಾಟಕಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನಗಳು

ಪ್ರಸ್ತುತ ಕತೆಯನ್ನು ಅವರ 'ಪುಟ್ಟಲಕ್ಷ್ಮಿ ಕಥೆಗಳು' ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## 5. ಹುಚ್ಚು ಹುರುಳು :



ಲೇಖಕ : ರಾಯಸಂ ಭೀಮಸೇನಾ ರಾವ್
ಕಾವ್ಯನಾಮ : ಬೀಚಿ
ಜನನ : 1913, ಹರಪಹಳ್ಳಿ
ಹಾಸ್ಯ ಕೃತಿಗಳು : ನಿರ್ಭಯಾಗ್ರಫಿ, ತಿಮ್ಮನ ತಲೆ, ತಿಮ್ಮರಸಾಯನ

## ಪಾಠ 6: ಧನ್ಯವಾದ ಹೇಳಿದ ಕೊಕ್ಕರೆ

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹರಿಯ ಗುಣ ಎಂತಹುದು? ಉ : ಸದ್ಗುಣ & ಕರುಣಾಳುವೂ ಆಗಿದ್ದನು.

2. ಕೊಕ್ಕರೆಗೆ ಏನಾಗಿತ್ತು? ಉ : ಕೊಕ್ಕರೆಗೆ ಬಾಣವು ಚುಚ್ಚಿ ಗಾಯವಾಗಿತ್ತು.

3. ಹರಿಯು ಕೊಕ್ಕರೆಯನ್ನು ಹೇಗೆ ಉಪಚರಿಸಿದನು?

ಉ : ಹರಿಯು ಮೆಲ್ಲನೆ ಆ ಬಾಣವನ್ನು ಹೊರತೆಗೆದನು. ಗಾಯಕ್ಕೆ ತನಗೆ ತಿಳಿದ ರಸಮೂಲಿಕೆಯನ್ನು ಹಾಕಿದನು. ಕೊಕ್ಕರೆಯ ನೋವು ಕಡಿಮೆಯಾಯಿತು.

4. ವೃದ್ಧ ತಂದೆ ತಾಯಿಗಳು ಹುಡುಗಿಗೆ ಏನು ಹೇಳಿದರು?

ಉ : "ಹುಡುಗಿ, ನೀನು ನಮ್ಮಲ್ಲೇ ಇದ್ದುಬಿಡು, ನಮ್ಮ ಮಗಳ ಹಾಗೆ ನೋಡ್ಕೋತೇವೆ" ಎಂದರು.

5. ಹರಿಗೆ ಪೀತಾಂಬರ ಮಾರಿದಾಗ ಬಂದ ಹಣವೆಷ್ಟು? ಉ : ನೂರಾರುವರಹಗಳು

**ಆ. ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

1. ಹುಡುಗಿ ಕೊಠಡಿಯೊಳಗೆ ಏನು ಮಾಡುತ್ತಿದ್ದಳು?

**ಉ : ಕೊಕ್ಕರೆಯು ಚಿನ್ನ ಬೆಳ್ಳಿ ದಾರಗಳನ್ನು ಕೂಡಿಸಿ ಕೊಕ್ಕರೆಯೊಂದು ಪೀತಾಂಬರವನ್ನು ನೇಯುತ್ತಿತ್ತು.**

2. ಹರಿಯು ಕೊಠಡಿಯೊಳಗೆ ಹೋದಾಗ ಆದ ಆಶ್ಚರ್ಯವೇನು?

**ಉ : ಬಾಗಿಲನು ನೂಕಿ ಒಳಗೆ ಹೋದನು. ಆಶ್ಚರ್ಯ! ಅಲ್ಲಿ ಹುಡುಗಿ ಇರಲಿಲ್ಲ, ಚಿನ್ನ ಬೆಳ್ಳಿ ದಾರಗಳನ್ನು ಕೂಡಿಸಿ ಕೊಕ್ಕರೆಯೊಂದು ಪೀತಾಂಬರವನ್ನು ನೇಯುತ್ತಿತ್ತು.**

**ಇ. ಈ ಮಾತುಗಳ ಸಂದರ್ಭವನ್ನು ವಿವರಿಸಿರಿ.**

1. "ನಮ್ಮ ಮಗಳ ಹಾಗೆ ನೋಡ್ಕೋತೇವೆ."

**ಉ : ಈ ವಾಕ್ಯವನ್ನು 'ಧನ್ಯವಾದ ಹೇಳಿದ ಕೊಕ್ಕರೆ ಎಂಬ ಪಾಠದಿಂದ ತೆಗೆದುಕೊಳ್ಳಲಾಗಿದೆ.**

**ಯಾರು : ವೃದ್ಧ ತಂದೆ-ತಾಯಿ, ಯಾರಿಗೆ : ಹುಡುಗಿಗೆ. ಯಾವಾಗ: ಹುಡುಗಿ ಹರಿಯ ಮನೆಯಲ್ಲಿ ರಾತ್ರಿ ಕಳೆ ಮರುದಿನ**

2. "ಶ್ರೀಮಂತ ವರ್ತಕರಿಗೆ ಮಾರಿ ಬನ್ನಿ."

**ಉ : ಈ ವಾಕ್ಯವನ್ನು 'ಧನ್ಯವಾದ ಹೇಳಿದ ಕೊಕ್ಕರೆ ಎಂಬ ಪಾಠದಿಂದ ತೆಗೆದುಕೊಳ್ಳಲಾಗಿದೆ.**

**ಯಾರು : ಹುಡುಗಿ, ಯಾರಿಗೆ : ಹರಿಗೆ. ಯಾವಾಗ: ಹುಡುಗಿ ಮೂರು ದಿನದ ನಂತರ ಪಿತಾಂಬರ ನೇಯ್ದು ತಂದಾಗ.**

3. "ನಾನು ನೀನು ಕಾಪಾಡಿದ ಕೊಕ್ಕರೆಯೇ!"

**ಉ : ಈ ವಾಕ್ಯವನ್ನು 'ಧನ್ಯವಾದ ಹೇಳಿದ ಕೊಕ್ಕರೆ ಎಂಬ ಪಾಠದಿಂದ ತೆಗೆದುಕೊಳ್ಳಲಾಗಿದೆ.**

**ಯಾರು : ಹರಿ, ಯಾರಿಗೆ : ಕೊಕ್ಕರೆಗೆ. ಯಾವಾಗ: ಹರಿಯು ಕೊಠಡಿಯೊಳಗೆ ಹೋದಾಗ ಅಲ್ಲಿ ಕೊಕ್ಕರೆ ಕಂಡು ಹೇಳಿದನು.**

## ಪಾಠ 6 : ಮೆರವಣಿಗೆ

**ಅ. ಗುಂಪಿಗೆ ಸೇರದ ಪದಗಳನ್ನು ಆಯ್ದು ಬರೆಯಿರಿ.**

1. ಹಬೀಬ್, ದೊಡ್ಡೇಶ, ರವಿ, ಹಂಪಣ್ಣ.

2. ಕಲ್ಪನ, ಉನ್ನತಿ, ಡಾಲಿ, ಡೀನಾ.

3. ವಾದ್ಯ, ಘೋಷಣಾ ಫಲಕ, ನೃತ್ಯ, ಜಾತ್ರೆ.

**ಆ. ಪದಗಳ ಅರ್ಥ ಬರೆಯಿರಿ.**

1. ಸಿದ್ಧತೆ = ತಯಾರು 2. ಅಲಂಕಾರ = ಸಿಂಗಾರ 3. ಖುಷಿ = ಸಂತೋಷ 4. ರಾಶಿ = ಗುಂಪು

**ಇ. ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

1. ಸಕ್ರಿಯವಾಗಿ ದಯವಿಟ್ಟು ಪಾಲ್ಗೊಳ್ಳಬೇಕು ಎಲ್ಲರೂ. **ಉ : ದಯವಿಟ್ಟು ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು.**

2. ಅದು ಆಯ್ತು ಬಾರಿಸು ಹೋಗದಂತೆ ಹರಿದು. **ಉ : ಆಯ್ತು ಅದು ಹರಿದು ಹೋಗದಂತೆ ಬಾರಿಸು.**

3. ಮತ್ತೆ ನೀಡಿದರು ಮತ್ತೆ ಶಿಕ್ಷಕರು ವಿವರಣೆ. **ಉ : ಶಿಕ್ಷಕರು ಮತ್ತೆ ಮತ್ತೆ ವಿವರಣೆ ನೀಡಿದರು.**

4. ಭವ್ಯತೆಗೆ ತಾಯಿ ಜನರೆಲ್ಲ ಭುವನೇಶ್ವರಿಯ ಮುಗಿಯುತ್ತಿದ್ದಾರೆ ಕೈ.

**ಉ : ತಾಯಿ ಭುವನೇಶ್ವರಿಯ ಭವ್ಯತೆಗೆ ಜನರೆಲ್ಲ ಕೈ ಮುಗಿಯುತ್ತಿದ್ದಾರೆ.**

**ಈ. ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

1. ಕಾಳಜಿ : **ನಮ್ಮ ಶಾಲೆಯ ಬಗ್ಗೆ ನಮಗೆ ಕಾಳಜಿ ಇರಬೇಕು.**
2. ಜವಾಬ್ದಾರಿ : **ಈ ದೇಶದ ಅಭಿವೃದ್ಧಿಯ ಜವಬ್ದಾರಿ ನ್ಮಯ ಮೇಲಿದೆ.**
3. ಮೆರವಣಿಗೆ : **ನಮ್ಮ ಊರಿನಲ್ಲಿ ತಾಯಿ ಗುಂಜಲಮ್ಮನ ಮೆರವಣಿಗೆ ನಡೆಯುತ್ತದೆ.**
4. ಗ್ರಂಥಾಲಯ : **ನಮ್ಮ ಶಾಲೆಯ ಗ್ರಂಥಾಲಯದಲ್ಲಿ ಉಪಯುಕ್ತವಾದ ಪುಸ್ತಕಗಳಿವೆ.**

**ಉ. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಶಿಕ್ಷಕರು ಏನನ್ನು ತಯಾರಿಸಿದ್ದರು? **ಉ : ಯೋಜನೆಯನ್ನು**
2. ಹಬೀಬ್ ಯಾವ ಜವಾಬ್ದಾರಿಯನ್ನು ವಹಿಸಿಕೊಂಡನು? **ಉ: ವಾದ್ಯದ ಜವಾಬ್ದಾರಿ**
3. ಉಪಾಹಾರ ಕೊಡಿಸುವ ಜವಾಬ್ದಾರಿಯನ್ನು ಯಾರು ವಹಿಸಿಕೊಂಡರು? **ಉ : ಊರಿನ ಹಿರಿಯರು.**
4. ಶಿಕ್ಷಕರು ಏಕೆ ಸಂತಸಗೊಂಡರು?

**ಉ : ಶಿಕ್ಷಕರ ಯೋಜನೆಯಂಯೆ ಎಲ್ಲಾ ಕಾರ್ಯಗಳು ಹಂಚಿಕೆಯಾಗಿದ್ದಕ್ಕೆ ಸಂಸತಗೊಂಡರು.**

5. ಹಂಪಣ್ಣ ಹೇಗೆ ಬ್ಯಾಂಡ್ ಬಾರಿಸುತ್ತಿದ್ದನು?

**ಉ : ಹಂಪಣ್ಣನಿಗೆ ಎಲ್ಲರೂ ತನ್ನನ್ನು ನೋಡಬೇಕೆಂಬ ಆಸೆ. ವಿವಿಧ ಭಂಗಿಯಲ್ಲಿ ಬ್ಯಾಂಡ್ ಬಾರಿಸಿದ. ಬೀಗುತ್ತಾ ಹೆಜ್ಜೆ ಹಾಕಿದ.**

**ಊ. ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಶಿಕ್ಷಕರು ಸಭೆ ಕರೆದ ಉದ್ದೇಶವನ್ನು ತಿಳಿಸಿರಿ.

**ಉ : ನವೆಂಬರ್1 ರ ಕನ್ನಡ ರಾಜ್ಯೋತ್ಸವಕ್ಕೆ ಭುವನೇಶ್ವರಿ ಮೆರವಣಿಗೆಯನ್ನು ವಿಜೃಂಬಣೆಯಾಗಿ ಮಾಡಲು.**

2. ಶಿಕ್ಷಕರು ವಾದ್ಯ ತಂಡದವರಿಗೆ ನೀಡಿದ ಸೂಚನೆಗಳು ಯಾವುವು?

**ಉ : ನಿಮ್ಮ ತಂಡದಲ್ಲಿ ಹತ್ತು ಜನರಿರಲಿ. ಬೇಸ್ ಡ್ರಂ ಮತ್ತು ಸೈಡ್ ಡ್ರಂ ಬಾರಿಸಲು ಒಬ್ಬೊಬ್ಬರಿರಲಿ. ತುತ್ತೂರಿ, ತಾಳ ಇತ್ಯಾದಿಗಳಿಗೆ ಇಬ್ಬಿಬ್ಬರಿರಲಿ. ಎಲ್ಲರೂ ಒಂದೇ ರೀತಿಯ ವಸ್ತ್ರ ಧರಿಸಿರಬೇಕು. ತುತ್ತೂರಿಯವರು ಮುಂದೆ ಇದ್ದು ಒಂದೊಂದೇ ಹೆಜ್ಜೆ ಹಾಕಬೇಕು. ಒಂದೇ ವೇಗದಲ್ಲಿ ಸಾಗಬೇಕು. ಊರಿನ ಕೆಲವು ಸ್ಥಳಗಳಲ್ಲಿ ನೃತ್ಯ ತಂಡದವರು ನೃತ್ಯ ಮಾಡುವಾಗ ವಾದ್ಯ ನುಡಿಸುವುದನ್ನು ನಿಲ್ಲಿಸಬೇಕು**

3. ಭುವನೇಶ್ವರಿಯ ಮೆರವಣಿಗೆಯ ಬಗ್ಗೆ ಜನರ ಮಾತುಗಳೇನು?

**ಉ: "ಎಂಥ ಅಪೂರ್ವ ದೃಶ್ಯ! ನೋಡಲು ಎರಡು ಕಣ್ಣುಗಳು ಸಾಲವು. ಯಾವ ದಸರೆಗೂ ಕಡಿಮೆ ಇಲ್ಲ" ಎಂದು ಜನರು ಮಾತನಾಡುತ್ತಿದ್ದರು. ಕೆಲವರಿಗೆ ಮಾತೇ ಹೊರಡಲಿಲ್ಲ. ಇನ್ನು ಕೆಲವರು ಅಬ್ಬಬ್ಬಾ! ಎಂದು ಬೆರಗಾದರು.**

**ಋ. ಕೆಳಗಿನ ವಾಕ್ಯಗಳಲ್ಲಿ ಜೋಡುನುಡಿಗಳನ್ನು ಗುರುತಿಸಿ ಬರೆಯಿರಿ.**

1. ನಮ್ಮ ನೆರೆಹೊರೆಯವರು ಬಹಳ ಒಳ್ಳೆಯವರು. **ಉ : ನೆರೆ–ಹೊರೆಯವರು.**

2. ಅಮ್ಮ ರಾತ್ರಿಹಗಲು ಕೆಲಸ ಮಾಡುತ್ತಾಳೆ. **ಉ : ರಾತ್ರಿ–ಹಗಲು**

3. ನಾಟಕದಲ್ಲಿ ವಿಧವಿಧವಾದ ಉಡುಗೆತೊಡುಗೆ ಧರಿಸುತ್ತಾರೆ. **ಉ : ಉಡುಗೆ–ತೊಡುಗೆ**

ಎ. ಸರಿಹೊಂದುವ ಬಿಡಿ ಪದಗಳನ್ನು ಸೇರಿಸಿ ಜೋಡುನುಡಿ ಸೇರಿಸಿರಿ.

ಆಟ, ತಿಂಡಿ, ಹೊರಗೆ, ದಿಕ್ಕು, ತೀರ್ಥ, ಪಕ್ಕ, ದೆಸೆ, ಒಳಗೆ, ಅಕ್ಕ, ಕೊಳ್ಳ, ಪಾಠ, ಹಳ್ಳ,

**ಉ : ಆಟ–ಪಾಠ, ತಿಂಡಿ–ತೀರ್ಥ, ಹೊರಗೆ–ಒಳಗೆ, ದಿಕ್ಕು–ದೆಸೆ, ಅಕ್ಕ–ಪಕ್ಕ, ಹಳ್ಳ–ಕೊಳ್ಳ**

## ಪಾಠ 7 ಯಾಣದ ಕುರಿತೊಂದು ಪತ್ರ

**ಅ. ಇಲ್ಲಿರುವ ಪದಗಳನ್ನು ಬಳಸಿ ಸೂಕ್ತವಾದುದನ್ನು ಬಿಟ್ಟ ಸ್ಥಳದಲ್ಲಿ ತುಂಬಿರಿ.**

(ಪದ್ಮಿನಿ, ರಾಗಿಣಿ ಮತ್ತು ಜೆನಿಫರ್, ಗುಪ್ತ, ರಾಜು, ದಂತ.)

1. ಅದೊಂದು ಭಾನುವಾರ ಎಲ್ಲರೂ ________ ವಿನ ಮನೆಗೆ ಬಂದರು. **ಉ : ರಾಜು**

2. 'ಇ ಮೇಲ್' ತೆರೆಯಲು ________ ಸಂಕೇತದ ಅಗತ್ಯವಿದೆ. **ಉ : ಗುಪ್ತ**

3. ವಿಶೇಷ ಪತ್ರ ತಯಾರಿಸಲು ಹೇಳಿದ್ದು ________ ಮೇಡಂ **ಉ: ಪದ್ಮಿನಿ**

4. ಯಾಣದ ಕುರಿತಾಗಿ ಒಂದು __________ ಕಥೆಯಿದೆ. **ಉ : ದಂತ**

5. ಯಾಣದ 'ಚಿತ್ರಗಳನ್ನು ಅದರ 'ವಿವರಗಳನ್ನು ____________________ ಓದಿದರು. **ಉ : ರಾಗಿಣಿ ಮತ್ತು ಜೆನಿಫರ್**

**ಆ. ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.**

1. ಸಲೀಂ, ಸುಂದರ್, ರಾಗಿಣಿ, ಜೆನಿಫರ್.

2. ಕಾಗದ, ಪತ್ರ, ದೂರವಾಣಿ, ಓಲೆ. **ಉ : ದೂರವಾಣಿ**

3. ಹೆಬ್ಬಂಡೆ, ಹಿರಿದು ಬಂಡೆ, ಕಿರಿದು ಬಂಡೆ, ದೊಡ್ಡ ಬಂಡೆ. **ಉ : ಕಿರಿದು ಬಂಡೆ**

4. ಸಂತೋಷ, ದುಃಖ, ಆನಂದ, ಸುಖ. **ಉ : ದುಃಖ**

5. ಸಂಪತ್ತು, ಆಪತ್ತು, ಧನ, ಐಶ್ವರ್ಯ. **ಉ : ಆಪತ್ತು**

**ಇ. ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

1. ರಾಜುವಿನ ಮನೆಗೆ ಯಾರು ಯಾರು ಬಂದರು?

**ಉ: ಸಲೀಂ, ರಾಗಿಣಿ, ಜೆನಿಫರ್, ಮತ್ತು ಶಂಕರ**

2. ಇ–ಅಂಚೆ ಎಂದರೇನು?

**ಉ: 'ಇ–ಮೇಲ್' ಅಂದರೆ ಕಂಪ್ಯೂಟರ್ ಮೂಲಕ ಪತ್ರಗಳನ್ನು ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳುವ ಒಂದು ಜನಪ್ರಿಯ ವಿಧಾನ. 'ಇ'ಅಂದರೆ'ಇಂಗ್ಲಿಷ್ನಲ್ಲಿ'ಇಲಕ್ಟ್ರಿನಿಕ್', 'ಮೇಲ್' ಎಂದರೆ 'ಅಂಚೆ' ಹಾಗಾಗಿ ಎಲೆಕ್ಟ್ರಾನಿಕ್ ಮೇಲ್ನ್ನು 'ಇ–ಅಂಚೆ' ಎನ್ನುತ್ತಾರೆ.**

3. ಯಾಣದ ಯಾವ ಶಿಖರ ಉಕ್ಕಿನಕೋಟೆಯಂತಿದೆ? **ಉ : ಭೈರವೇಶ್ವರ ಶಿಖರ**

4. ಯಾಣದ ಕಲ್ಲು ಯಾವುದರಿಂದ ಉತ್ಪತ್ತಿಯಾಗಿದೆ? **ಉ : ಅತಿ ಹೆಚ್ಚು ಖನಿಜ ಸಂಪತ್ತಿನಿಂದ, ಸುಣ್ಣದ ಕಲ್ಲಿನಿಂದ**

5. ಯಾಣದಲ್ಲಿ ಯಾವ ದೇವರ ಉತ್ಸವ ನಡೆಯುತ್ತದೆ? **ಉ : ಭೈರವೇಶ್ವರ**

**ಈ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸುಂದರ್ ಗುಪ್ತ ಸಂಕೇತವನ್ನು ರಾಜುವಿಗೆ ಮಾತ್ರ ಏಕೆ ಹೇಳಿದರು?

**ಉ : ಒಬ್ಬರ ಗುಪ್ತ ಸಂಕೇತ ಇನ್ನೊಬ್ಬರಿಗೆ ಗೊತ್ತಾಗಬಾರದು. ಗೊತ್ತಾದರೆ ಯಾರು ಬೇಕಾದರೂ ಪತ್ರ ಓದಬಹುದಲ್ವೆ? ಬೇರೆಯವರ ಪತ್ರ ನಾವು ಓದಬಾರದಲ್ವೆ? ಅದಕ್ಕಾಗಿ ಗುಪ್ತ ಸಂಕೇತ ಅವನಿಗೆ ಮಾತ್ರ ಹೇಳಿದ್ದು" ಎಂದರು.**

2. ಯಾಣದ ಕುರಿತಾಗಿ ಇರುವ ಒಂದು ದಂತಕಥೆಯನ್ನು ಬರೆಯಿರಿ.

**ಉ: ಪುರಾಣ ಕಾಲದಲ್ಲಿ ಯಾಣದಲ್ಲಿ ಭಸ್ಮಾಸುರನೆಂಬ ರಾಕ್ಷಸ ವಾಸವಾಗಿದ್ದ. ಈತನ ಉಪಟಳ ಸಹಿಸಲು ಅಸಾಧ್ಯವಾದಾಗ ಶಿವನು ಆತನನ್ನು ಸುಟ್ಟು ಬೂದಿ ಮಾಡಿದ. ಈ ಬೂದಿಯಿಂದ ದೊಡ್ಡದಾದ ಶಿಖರ ಬೆಳೆಯಿತು ಎಂಬುದೇ ಆ ದಂತಕಥೆ**

3. ಯಾವ ದೃಶ್ಯಗಳು ನೋಡುಗರನ್ನು ಚಕಿತಗೊಳಿಸುತ್ತವೆ?

**ಉ: 390 ಅಡಿ ಎತ್ತರದ ಭೈರವೇಶ್ವರ ಶಿಖರ**

**ಉ. ಸಂಧಿ ಬಿಡಿಸಿ. ಸಂಧಿಯನ್ನು ಹೆಸರಿಸಿರಿ.**

ಭಸ್ಮಾಸುರ : **ಉ: ಭಸ್ಮ+ ಅಸುರ**

ಭೈರವೇಶ್ವರ **ಉ: ಭೈರವ + ಈಶ್ವರ**

ಐಕ್ಯೈಕ **ಉ: ಏಕ+ಏಕ**

ಇತ್ಯಾದಿ **ಉ: ಇತಿ+ಆದಿ**

ಸೂರ್ಯೋದಯ **ಉ : ಸೂರ್ಯ+ಉದಯ**

## ಪಾಠ 8 : ಕರ್ನಾಟಕ ಏಕೀಕರಣ

**ಅ. ಹೊಂದಿಸಿ ಬರೆಯಿರಿ.**

| 'ಅ' | 'ಬ' | |
|---|---|---|
| 1. 1890 | ಅ. ಕರ್ನಾಟಕ ರಾಜ್ಯ ಎಂಬ ಹೆಸರು ಬಂದಿದ್ದು | 5 |
| 2. 1916 | ಆ. ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆ | 3 |
| 3. 1915 | ಇ. ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆ | 1 |
| 4. 1956 | ಈ. ಕರ್ನಾಟಕ ಸಭೆ ಸಂಸ್ಥೆ ಪ್ರಾರಂಭ | 2 |
| 5. 1973 | ಉ. ಮೈಸೂರು ರಾಜ್ಯ ಉದಯ | 4 |

**ಆ. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

1. ಹೋರಾಟ : **ಕನ್ನಡದ ಉಳಿವಿಗಾಗಿ ಇಂದು ಮತ್ತೆ ಹೋರಾಟ ಆರಂಭವಾಗಿದೆ.**

2. ಸವಾಲು : **ನಾವು ಯಾವಾಗಲೂ ಸವಾಲನ್ನು ಸ್ವೀಕರಿಸಿ ಅದರಲ್ಲಿ ಗೆಲ್ಲಬೇಕು.**

3. ಕಲ್ಪಿಸು : **ಸರ್ಕಾರ ನಮಗೆ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿದೆ.**

4. ಅಗ್ರಗಣ್ಯ : **ನಮ್ಮ ಊರಿನಲ್ಲಿ ಗುಂಜಲಮ್ಮ ದೇವಿ ಜಾತ್ರಾ ಉತ್ಸವವೇ ಅಗ್ರಗಣ್ಯವಾದುದು.**

5. ಪ್ರತಿಭೆ : **ನಮ್ಮ ಶಾಲಾ ಮಕ್ಕಳು ಪ್ರತಿಭಾ ಕಾರಂಜಿ ಸ್ಪರ್ದೆಯಲ್ಲಿ ಬಹುಮಾನ ಗೆದ್ದರು.**

**ಇ. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ರೇಡಿಯೋದಲ್ಲಿ ಯಾವ ನುಡಿ ಹರಿದು ಬಂತು?

**ಉ : "ಆಕಾಶವಾಣಿ, ಇದೀಗ ಮಕ್ಕಳ ಕಾರ್ಯಕ್ರಮ. ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದ ಹಿರಿಯರೊಬ್ಬರು ತಮ್ಮ ಅನುಭವಗಳನ್ನು ನಿಮ್ಮ ಮುಂದೆ ಇದೀಗ ಪ್ರಸ್ತುತಪಡಿಸುತ್ತಾರೆ. ಆಲಿಸಿರಿ" ಎಂಬ ನುಡಿ ಹರಿದುಬಂತು.**

2. ಬ್ರಿಟಿಷರ ಆಡಳಿತದಲ್ಲಿ ಕನ್ನಡಿಗರು ಒಟ್ಟಾಗಿರಲು ಅವಕಾಶವೇ ಇರಲಿಲ್ಲ. ಯಾಕೆ?

**ಉ : ಮೈಸೂರು ಸಂಸ್ಥಾನ ಹೊರತುಪಡಿಸಿ ಉಳಿದ ಕನ್ನಡದ ಪ್ರದೇಶಗಳೆಲ್ಲ ಮುಂಬೈ, ಮದ್ರಾಸ್, ಕೊಡಗು ಮತ್ತು ಇತರ ಸಂಸ್ಥಾನಗಳಲ್ಲಿ ಹಂಚಿಹೋಗಿತ್ತು**

3. ಕನ್ನಡದ ಪರವಾಗಿ ಹೋರಾಟ ಮಾಡಿದವರಲ್ಲಿ ಕೆಲವರ ಹೆಸರು ತಿಳಿಸಿರಿ.

**ಉ: ರಾ. ಹ. ದೇಶಪಾಂಡೆ, ರೊದ್ದ ಶ್ರೀನಿವಾಸರಾವ್ ,ಆಲೂರು ವೆಂಕಟರಾಯ, ಡೆಪ್ಯೂಟಿ ಚೆನ್ನಬಸಪ್ಪ**

4. ವಂಗಭಂಗ ಚಳುವಳಿಯನ್ನು ಯಾರು ನಡೆಸಿದರು?

**ಉ : 1905ರ ಆಗೋಸ್ತು 16ರಂದು ಬ್ರಿಟಿಷ್ ಸರ್ಕಾರ ಬಂಗಾಳ ರಾಜ್ಯ ವಿಭಜನೆಗೆ ಮುಂದಾಯಿತು. ಇದನ್ನು ಪ್ರತಿಭಟಿಸಿದ ಬಂಗಾಳಿಗರು 'ವಂಗಭಂಗ' ಎನ್ನುವ ಬೃಹತ್ತಾದ ಚಳುವಳಿಯನ್ನು ನಡೆಸಿದರು.**

5. ವಿದ್ಯಾವರ್ಧಕ ಸಂಘದ ಕೆಲಸವೇನಾಗಿತ್ತು?

**ಉ : ಕನ್ನಡದಲ್ಲಿ ಶಿಕ್ಷಣ, ಕನ್ನಡದಲ್ಲಿ ಸ್ವತಂತ್ರ ಕೃತಿಗಳ ರಚನೆ ಹಾಗೂ 1896ರಲ್ಲಿ 'ವಾಗ್ಭೂಷಣ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿತು. ಇದು ಕನ್ನಡಿಗರೆಲ್ಲ ಒಂದಾಗಲು ಪ್ರೇರಣೆ ನೀಡಿತು..**

6. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಯಾವಾಗ ಬಂದಿತು?

**ಉ: 1973ರ ನವೆಂಬರ್ 1ರಂದು ಕನ್ನಡಿಗರೆಲ್ಲರ ಆಶಯದಂತೆ ಮೈಸೂರು ರಾಜ್ಯವು 'ಕರ್ನಾಟಕ ರಾಜ್ಯ' ಎಂಬ ಹೆಸರು ಪಡೆಯಿತು..**

**ಈ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕನ್ನಡನಾಡು ಏಕೀಕರಣಗೊಳ್ಳಲು ಕನ್ನಡಿಗರಿಗ 'ಪ್ರೇರಣೆಯಾದ 'ಘಟನೆ 'ಯಾವುದು?

**ಉ : ಬಂಗಾಳಿಗರು 'ವಂಗಭಂಗ' ಎನ್ನುವ ಬೃಹತ್ತಾದ ಚಳುವಳಿಯನ್ನು ನಡೆಸಿದರು. ಇದಕ್ಕೆ ಮಣಿದ ಸರ್ಕಾರ 1911ರಲ್ಲಿ ಪುನಃ ಬಂಗಾಳವನ್ನು ಒಂದು ಮಾಡಿತು. ಈ ಘಟನೆಯಿಂದ ಪ್ರೇರಿತರಾಗಿ ಕನ್ನಡದ ಕಟ್ಟಾಳುಗಳು ಕನ್ನಡಿಗರನ್ನು ಒಂದು ಮಾಡುವ ಹೋರಾಟವನ್ನು ಪ್ರಾರಂಭಿಸಿದರು.**

2. 'ಕನ್ನಡ ಸಾಹಿತ್ಯ ಪರಿಷತ್ತು' ಕರ್ನಾಟಕ ಏಕೀಕರಣದ ಬೇಡಿಕೆಗೆ ವೇದಿಕೆ ಕಲ್ಪಿಸಿದ್ದು ಹೇಗೆ?

**ಉ : ಕನ್ನಡ ನಾಡು –ನುಡಿಯ ಬೆಳವಣಿಗೆ, ಸಂರಕ್ಷಣೆ ಮತ್ತು ಕರ್ನಾಟಕ ಏಕೀಕರಣವೇ ಇದರ ಉದ್ದೇಶ. ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಲಾಯಿತು. ಕನ್ನಡಿಗರನ್ನು ಒಂದುಗೂಡಿಸಿ ಕರ್ನಾಟಕದ ಏಕೀಕರಣಕ್ಕೆ ದನಿ ಎತ್ತುವ ಮೂಲಕ ಏಕೀಕರಣದ ಬೇಡಿಕೆಗೆ ವೇದಿಕೆ ಕಲ್ಪಿಸಿತು.**

3. ಕರ್ನಾಟಕ ಸಭೆಯ ಮೊದಲ ಕಾರ್ಯಕ್ರಮದಲ್ಲಿ ಏನೆಲ್ಲಾ ಘಟನೆಗಳು ನಡೆದವು?

**ಉ : 25–12–1924ರಂದು ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ಸಭೆ'ಯ ಮೊದಲ ಕಾರ್ಯಕ್ರಮ ನಡೆಯಿತು. ಅವತ್ತು ಅಲ್ಲಿ ಹುಯಿಲಗೋಳ ನಾರಾಯಣರಾಯರು ರಚಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಮೊದಲಬಾರಿಗೆ ಹಾಡಲಾಯಿತು. ಈ ಸಭೆಯ ಪರಿಣಾಮವಾಗಿ ಮದ್ರಾಸ್ ಮತ್ತು ಮುಂಬೈ ವಿಧಾನ ಸಭೆಗಳಲ್ಲೂ ಕರ್ನಾಟಕ ಏಕೀಕರಣದ ವಿಷಯ ಪ್ರಸ್ತಾಪಿತಗೊಂಡಿತು.**

**ಉ. ಕೆಳಗಿನ ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬಂಗಾಳದಲ್ಲಿ ನಡೆದ 'ವಂಗ ಭಂಗ' ಚಳುವಳಿಯ ಬಗ್ಗೆ ಬರೆಯಿರಿ.

**ಉ : ಬ್ರಿಟಿಷರದ್ದು ಒಡೆದು ಆಳುವ ನೀತಿ. ಅದರಂತೆಯೆ 1905ರ ಆಗೋಸ್ತು 16ರಂದು ಬ್ರಿಟಿಷ್ ಸರ್ಕಾರ ಬಂಗಾಳ ರಾಜ್ಯ ವಿಭಜನೆಗೆ ಮುಂದಾಯಿತು. ಇದನ್ನು ಪ್ರತಿಭಟಿಸಿದ ಬಂಗಾಳಿಗರು 'ವಂಗಭಂಗ' ಎನ್ನುವ ಬೃಹತ್ತಾದ ಚಳುವಳಿಯನ್ನು ನಡೆಸಿದರು. ಇದಕ್ಕೆ ಮಣಿದ ಸರ್ಕಾರ 1911ರಲ್ಲಿ ಪುನಃ ಬಂಗಾಳವನ್ನು ಒಂದು ಮಾಡಿತು. ನೋಡಿ ಮಕ್ಕಳೇ, ಈ ಘಟನೆಯಿಂದ ಪ್ರೇರಿತರಾಗಿ ಕನ್ನಡದ ಕಟ್ಟಾಳುಗಳು ಕನ್ನಡಿಗರನ್ನು ಒಂದು ಮಾಡುವ ಹೋರಾಟವನ್ನು ಪ್ರಾರಂಭಿಸಿದರು.**

**1. ಪ್ರಶೆಗಳಿಗೆ ಉತ್ತರಿಸಿರಿ.**

ಅ. ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಯಾವ ಉನ್ನತ ಪದವಿಗೇರಿದರು? **ಉ : ಪ್ರಧಾನಿ.**

ಆ. ಇವರು ಎಲ್ಲಿ, ಯಾವಾಗ ಜನಿಸಿದರು

**ಉ : ಲಾಲ್ ಬಹಾದ್ದೂರ್ ಶಾಸ್ತ್ರಿಗಳು 1904 ಅಕ್ಟೋಬರ್ 2ರಂದು ವಾರಣಾಸಿ ಹತ್ತಿರದ ಮೊಗಲ್ ಸರಾಯಿಯಲ್ಲಿ ಶಾರದಾ ಪ್ರಸಾದ, ರಾಮದುಲಾರಿ ದೇವಿಯವರ ಮಗನಾಗಿ ಜನಿಸಿದರು .**

ಇ. ತಂದೆ ತೀರಿಕೊಂಡ ಬಳಿಕ ಶಾಸ್ತ್ರಿಯವರು ಹೇಗೆ ಬೆಳೆದರು?

**ಉ : ತಾಯಿಯ ಆರೈಕೆಯಲ್ಲಿ ಅಜ್ಜನ ಮನೆಯಲ್ಲಿ ಬೆಳೆದರು.**

ಈ. 'ಅಕ್ಟೋಬರ್ 2' ಇಬ್ಬರು ಮಹಾನ್ ವ್ಯಕ್ತಿಗಳ ಜನ್ಮದಿನ. ಅವರ ಹೆಸರೇನು?

**ಉ : ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ**

ಉ. ದೋಣಿ ದಾಟಿಸುವವನಿಗೆ ಕೊಡಲು ಹಣವಿಲ್ಲದಾಗ ಶಾಸ್ತ್ರಿ ಏನು ಮಾಡಿದರು?

**ಉ : ಗೆಳೆಯರಲ್ಲಿ ಕೈಚಾಚಲು ಮನಸ್ಸರಲಿಲ್ಲ. ಗಂಗಾನದಿಯನ್ನು ದಾಟಲೇಬೇಕು ಆಗ 'ಏನು ಮಾಡಿದರು ಗೊತ್ತೇ? ಗೆಳೆಯರ ಬಳಿ ತಡವಾಗಿ ಬರುವೆನೆಂದು ಹೇಳಿ ಸಂಜೆಯಾಗುತ್ತಿದ್ದಂತೆ ತುಂಬಿ ಹರಿಯುತ್ತಿದ್ದ ಗಂಗಾ ನದಿಯಲ್ಲಿ ಧುಮುಕಿ ಈಜಿ ಮನೆ ಸೇರಿದರು. ಜೀವನದ ಕೊನೆಯುಸಿರಿರುವವರೆಗೂ ಯಾರ ಬಳಿಯೂ ಕೈಚಾಚಲಿಲ್ಲ ನಮ್ಮ ಲಾಲ್ ಬಹಾದ್ದೂರ್ ಶಾಸ್ತ್ರಿಗಳು.**

ಊ. ದೂರದರ್ಶನ ವೀಕ್ಷಣೆಯ ಸಾಧಕ ಬಾಧಕಗಳ ಬಗ್ಗೆ ಒಂದು ಚಿಕ್ಕ ಪ್ರಬಂಧ ಬರೆಯಿರಿ

## ಪದ್ಯ ಪಾಠ 5 : ಹೊಸ ಬಾಳು

**ಅ. ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿಮಾಡಿರಿ.**

1. ಗಾಂಧೀ ತಾತನ..............................ಗುಬ್ಬಚ್ಚಿಯನು.................................. ನೋಡುತ್ತಿತ್ತು.

2. ಬೆಕ್ಕು..............................ಹಾಕುತ ಬರಲು..............................ಹಾರಿ ತಾ ಪಾರಾಗುತ್ತಿತ್ತು.

3. ಸಲ್ಲಾಪವಾಡುತಿಹ..............................ಜೋಡಿಯು.............................. ಮೋಜಿನಾಟ.

4. ಅಚ್ಚು....................ಜೋಡಿ ಅನುಕೂಲ ...................ಬೆರಗುಗೊಳಿಸುವ ಪ್ರತಿಭೆ ಗುಬ್ಬಿಗಳಿಗೆ.

5. ಸಜ್ಜಾದ..............................ನಲಿ ಹೂಡಬೇಕೆಂಬಾಸೆ .............................. ಬಾಳನು.

**ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಗೋಡೆಯ ಮೇಲೆ ಯಾರ ಚಿತ್ರವಿತ್ತು? **ಉ : ಗಾಂಧೀತಾತಾನ ಚಿತ್ರ**

2. ಪುಟ್ಟಹಕ್ಕಿಯು ಏನನ್ನು ಹುಡುಕುತ್ತಿತ್ತು? **ಉ : ಬಿದ್ದಿರುವ ಕಾಳುಗಳನ್ನು**

3. ಗುಬ್ಬಚ್ಚಿಗಳದ್ದು ಯಾವ ಬಗೆಯ ದಾಂಪತ್ಯ? **ಉ : ಅಚ್ಚು ಮೆಚ್ಚಿನ ಜೋಡಿ ಅನುಕೂಲ ದಾಂಪತ್ಯ**

4. ಗುಬ್ಬಚ್ಚಿಗಳು ಏನನ್ನು ಸಂಗ್ರಹಿಸುತ್ತಿದ್ದವು? **ಉ : ಅರಳೆ ಹುಲುಕಡ್ಡಿಗಳ ಹುಡುಕಿ ಸಂಗ್ರಹಿಸುತ್ತಿದ್ದವು.**

5. ಈ ಕವನವನ್ನು ಯಾವ ಸಂಕಲನದಿಂದ ಆರಿಸಲಾಗಿದೆ? **ಉ : ಬರೆಯುವೆನು ನಿನಗಾಗಿ**

**ಇ. ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿರಿ.**

1. ಗುಬ್ಬಚ್ಚಿಯು ಮನೆಯ ಅಂಗಳಕ್ಕೆ ಶೋಭೆ ಹೇಗೆ ತರುತ್ತಿತ್ತು?

**ಉ : ಜೊತೆಯಾಗಿ ಹಾರಾಡಿ ಜೊತೆಯಲ್ಲೆ ವಿಹರಿಸುತ ಅಂಗಳಕೆ ಶೋಭೆಯನು ನೀಡುತಿತ್ತು.**

2. ಗುಬ್ಬಚ್ಚಿಯ ಪ್ರತಿಭೆಯನ್ನು ಕವಿ ಹೇಗೆ ವಿವರಿಸಿದ್ದಾರೆ?

**ಉ : ಬೆರಗುಗೊಳಿಸುವ ಪ್ರತಿಭೆ ಗುಬ್ಬಿಗಳಿಗೆ ಉಭಯ ಪಕ್ಷಿಗಳಲ್ಲಿ ಮಿಗಿಲು ಯಾವುದು ಎಂದು ಹೇಳಲಾಗದು ಬುದ್ಧಿ ಜೀವಿಗಳಿಗೆ**

**ಈ. ಈ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿರಿ.**

1. ಪಾತ್ರಾಭಿನಯ : **ಪಾತ್ರ + ಅಭಿನಯ** :
2. ಮಹರ್ಷಿ : **ಮಹಾ + ಋಷಿ**
3. ಶಬ್ದಾಲಂಕಾರ : **ಶಬ್ದ + ಅಲಂಕಾರ**
4. ಚತುರೋಕ್ತಿ : **ಚತುರ + ಯುಕ್ತಿ**

**ಉ. ಇವುಗಳಿಗೆ ತಲಾ ಎರಡು ಉದಾಹರಣೆಗಳನ್ನು ಬರೆಯಿರಿ.**

1. ಸವರ್ಣದೀರ್ಘ ಸಂಧಿ **ದೇವ + ಆಲಯ = ದೇವಾಲಯ**

2. ಗುಣಸಂಧಿ : **ರಾಜ + ಇಂದ್ರ = ರಾಜೇಂದ್ರ**

**ಊ. ನುಡಿಗಟ್ಟಿನ ಸಹಾಯದಿಂದ ವಾಕ್ಯ ರಚಿಸಿರಿ.**

1. ಹೊಂಚುಹಾಕು : **ನಮ್ಮ ಸೈನಿಕರು ವೈರಿಗಳನ್ನು ಸೆದೆ ಬಡಿಯಲು ಹೊಂಚುಹಾಕುವರು.**

2. ಬೆಕ್ಕಸಬೆರಗಾಗು : **ನಾವು ಪ್ರವಾಸಕ್ಕೆ ಹೋದಾಗ ಯಾಣವನ್ನು ನೋಡಿ ಬೆಕ್ಕಸಬೆರಗಾಗಿದ್ದೆವು.**

3. ಮನೆಮಂದಿ : **ನಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಮನೆಮಂದಿಯಲ್ಲಾ ಬಂದು ಸೇರಿ ಸಂತಸ ಪಡುತ್ತಾರೆ.**

4. ಹುಲುಕಡ್ಡಿ : **ಮಾನವನು ತುಳಿದಾಡುವ ದಾರಿಯಲ್ಲಿ ಹುಲಕಡ್ಡಿಯೂ ಬೆಳೆಯೋದಿಲ್ಲ.**

## ಪದ್ಯ ಪಾಠ 7 : ಗಂಗವ್ವ ತಾಯಿ

### ಅ. ಬಿಟ್ಟಸ್ಥಳವನ್ನು ಕೆಳಗೆ ನೀಡಲಾದ ಸೂಕ್ತ ಪದಗಳಿಂದ ಭರ್ತಿಮಾಡಿರಿ.

1. ಬಾರವ್ವ ತಾಯಿ ________________ ತಾಯಿ. **ಉ : ಗಂಗವ್ವ**
2. ಹೊಳೆಯವ್ವ ತಾಯಿ __________ ತಾಯಿ. **ಉ : ಹೊಳಿಯವ್ವ**
3. ಮೈಮನಸ ಹೊಲಸೆಲ್ಲ ____________ ತಾಯಿ. **ಉ : ತೊಳೆಯವ್ವ**
4. ನೀರವ್ವ ಗಂಗವ್ವ ____________ ಬಾರವ್ವ. **ಉ: ಮಳಿಯಾಗಿ**
5. ಒಣಗೀದ ನೆಲದಾಗ __________ ಹೊಳೆಯವ್ವ. **ಉ : ಹಸುರಾಗಿ**

### ಆ. ಸಮಾನಾರ್ಥಕ ಪದಗಳನ್ನು ಬರೆಯಿರಿ.

1. ನೀರು : **ಗಂಗ, ಜಲ**
2. ನಭ : **ಆಕಾಶ, ಆಗಸ**
3. ಕುಣಿ : **ನೃತ್ಯ, ತಗ್ಗು.** 4. ತಾಯಿ : **ಮಾತೆ, ಅಮ್ಮ**

### ಇ. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ನೀರು ಎಲ್ಲೆಲ್ಲಿ ತುಂಬಬೇಕು ಎಂದು ಕವಿ ಹೇಳುತ್ತಾರೆ?

**ಉ : ನೆಲದ ಕಣ ಕಣದಾಗ ಮನದ ಪದ ಪದರಾಗ ತುಂಬವ್ವ ತಾಯಿ**

2. ನೀರು ಹೇಗೆಲ್ಲ ಹರಿದು ಬರಬೇಕೆಂದು ಕವಿ ವಿನಂತಿಸಿಕೊಂಡಿದ್ದಾರೆ?

**ಉ : ನೆಲದ ಒಳಹೊರಗೆಲ್ಲ ಪ್ರಾಣದಾ ತುಂಬೆಲ್ಲ ನಗುನಗುತ ನಲಿಯುತ್ತ ಪುಟಿಯುತ್ತ ಕುಣಿಯುತ್ತ ಚಿಮ್ಮುತ್ತ ಜಿಗಿಯುತ್ತ ಹರಿಯುತ್ತ ಸುರಿಯುತ್ತ ಧೋ ಧೋ ಬಾರವ್ವ ನೀರವ್ವ ಬಾರವ್ವ**

3. ಒಣಗಿದ ನೆಲದಲ್ಲಿ ನೀರು ಹೇಗೆ ಹೊಳೆಯಬೇಕು ಎಂದು ಕವಿ ಹೇಳುತ್ತಾರೆ?

**ಉ: ಒಣಗೀದ ನೆಲದಾಗ ಹಸುರಾಗಿ ಹೊಳಿಯವ್ವ**

4. ಈ ಕವನವನ್ನು ಬರೆದವರು ಯಾರು? **ಉ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರು**

### ಈ. ಕೊಟ್ಟಿರುವ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರು?

1. ನೆಲದ ಕಣಕಣದಾಗ ಮನದ ಪದಪದರಾಗ.
**ಉ : "ಈ ವಾಕ್ಯವನ್ನು 'ಗಂಗವ್ವ ತಾಯಿ' ಎಂಬ ಪದ್ಯ ಪಾಠದಿಂದ ತೆಗೆದುಕೊಳ್ಳಲಾಗಿದೆ.**
**ಯಾರು : ಕವಿಗಳು ಯಾರಿಗೆ :ಗಂಗವ್ವ ತಾಯಿಗೆ ಯಾವಾಗ: ಗಂಗವ್ವ ತಾಯಿ ಎಲ್ಲಿ ತುಂಬಬೇಕು ಎಂದು ಹೇಳುವಾಗ**

2. ಹರಿಯುತ್ತ ಸುರಿಯುತ್ತ ಧೋಧೋ ಬಾರವ್ವ.
**ಉ : "ಈ ವಾಕ್ಯವನ್ನು 'ಗಂಗವ್ವ ತಾಯಿ' ಎಂಬ ಪದ್ಯ ಪಾಠದಿಂದ ತೆಗೆದುಕೊಳ್ಳಲಾಗಿದೆ.**
**ಯಾರು : ಕವಿಗಳು ಯಾರಿಗೆ :ಗಂಗವ್ವ ತಾಯಿಗೆ ಯಾವಾಗ: ಗಂಗವ್ವ ತಾಯಿ ಹೇಗೆ ಬರಬೇಕು ಎಂದು ಹೇಳುವಾಗ**

3. ಒಣಗೀದ ನೆಲದಾಗ ಹಸಿರುಸಿರು ಉಳಿಸಾಕ.
**ಉ : "ಈ ವಾಕ್ಯವನ್ನು 'ಗಂಗವ್ವ ತಾಯಿ' ಎಂಬ ಪದ್ಯ ಪಾಠದಿಂದ ತೆಗೆದುಕೊಳ್ಳಲಾಗಿದೆ.**
**ಯಾರು : ಕವಿಗಳು ಯಾರಿಗೆ :ಗಂಗವ್ವ ತಾಯಿಗೆ ಯಾವಾಗ: ಗಂಗವ್ವ ತಾಯಿ ಏನು ಉಳಿಸಬೇಕು ಎಂದು ಹೇಳುವಾಗ**

4. ಜೀವದಾ ತುಣಕಾಗಿ ಮೈಮನಸ ಹೊಲಸೆಲ್ಲ.

**ಉ : "ಈ ವಾಕ್ಯವನ್ನು 'ಗಂಗವ್ವ ತಾಯಿ' ಎಂಬ ಪದ್ಯ ಪಾಠದಿಂದ ತೆಗೆದುಕೊಳ್ಳಲಾಗಿದೆ.**
**ಯಾರು : ಕವಿಗಳು ಯಾರಿಗೆ :ಗಂಗವ್ವ ತಾಯಿಗೆ ಯಾವಾಗ: ಗಂಗವ್ವ ತಾಯಿ ನಮ್ಮ ಮೈ ಮನಸು ತೊಳೆಬೇಕು ಎಂದು ಹೇಳುವಾಗ.**

**ಉ. ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿರಿ.**

1. ನೀರು ಎಲ್ಲೆಲ್ಲಿ ತುಂಬಬೇಕೆಂದು ಕವಿ ಬಯಸುತ್ತಾನೆ?
**ಉ: ನೆಲದ ಕಣ ಕಣದಾಗ ಮನದ ಪದ ಪದರಾಗ ತುಂಬವ್ವ ತಾಯಿ**
2. ಗಂಗವ್ವ ಇದ್ದರೆ ಎಲ್ಲೆಲ್ಲಿ, ಏನೇನು ಆಗುವುದೆಂದು ಕವಿ ಹೇಳಿದ್ದಾರೆ?
**ಉ : ನೀನೊಬ್ಬಳಿದ್ದರೆ ಜಗದಾಗ ನಭದಾಗ ಜಳ ಜಳ ಜಳ ಜಳ ಜಲ ಜಲ ತಾಯಿ**
3. ನೀರು ಯಾವ ಯಾವ ಕೆಲಸಕ್ಕೆ ಬೇಕು ಎಂದು ಕವಿ ಹೇಳಿದ್ದಾರೆ?
**ಉ : ಒಣಗೀದ ನೆಲದಾಗ ಹಸಿ ಹಸಿರು ನೆಡಲಾಕ ಉಸಿರುಸಿರು ಉಳಿಸಾಕ ಕೊಳೆಯೆಲ್ಲ ತೊಳಿಯಾಕ.**

**ಊ. ಕೊಟ್ಟಿರುವ ಪದ್ಯದಲ್ಲಿ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.**

ಬೆಳ್ಳಾನ ಎರಡೆತ್ತು ಬೆಳ್ಳಿಯ ಬಾರುಕೋಲು
ಹಳ್ಳಾದ ಮಾಗಿ ಹೊಡೆದಾವು । ಎತ್ತಿನ
ತೆಳ್ಳಾನ ಹೊಟ್ಟೆ ಹಸಿದಾವು

**ಉ: ಬೆಳ್ಳಾನ – ಹಳ್ಳಾದ –ತೆಳ್ಳಾನ, ಹೊಡೆದಾವು – ಹಸಿದಾವು**

## ಪದ್ಯ ಪಾಠ 7. ಹೃದಯ ವಚನಗಳು

**ಅ. ಪದಗಳ ಅರ್ಥ ಬರೆಯಿರಿ.**

1. ಉಪಕರಿಸು : **ಸಹಾಯ ಮಾಡು**
2. ಮೊರೆವ : ಘರ್ಜಿಸುವ
3. ನಿರಾಳ : **ನೆಮ್ಮದಿ**
4. ಸಾಧಿತ : **ಸಾಧಿಸಿದ**
5. ಬಹುರೂಪಿ : **ನಾನಾ ವಿಧದ**

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಯಾವ ಚಾಳಿಯನ್ನು ದೂರವಿಡಿ ಎಂದು ಅಮೃತ ಸೋಮೇಶ್ವರರು ಹೇಳುತ್ತಾರೆ? **ಉ : ಓಲೈಕೆಯ ಚಾಳಿಯ**

2. ಹೃದಯದ ಬೆಸುಗೆ ಸಾಧಿತವಾಗುವುದು ಯಾವಾಗ? **ಉ : ಹೃದಯ ಶೋಧನೆಗೈದಾಗ**

3. ಅಂಕಿತನಾಮವು ವಚನದ ಯಾವ ಭಾಗದಲ್ಲಿ ಬರುತ್ತದೆ? **ಉ : ಕೊನೆಯ ಭಾಗದಲ್ಲಿ**

4. ನಾವು ಮೊದಲು ಯಾವ ಭಾಷೆಯನ್ನು ಕಲಿಯಬೇಕು? **ಉ : ಹೃದಯದ ಭಾಷೆಯನ್ನು**

5. ಜನ ಕೆರಳಿ ಜರೆಯುವುದು ಯಾವಾಗ? **ಉ: ಹತ್ತು ಬಾರಿ ಮೆಚ್ಚಿ ಮತ್ತೊಂದು ಬಾರಿ ಟೀಕಿಸಲು, ಕೆರಳಿ ಜರೆವರಯ್ಯ**

**ಉ. ಕೆಳಗಿನ ಚಿಹ್ನೆಗಳನ್ನು ಗಮನಿಸಿ ಅದರ ಹೆಸರು ಬರೆಯಿರಿ.**

1. ; **ಅರ್ಧ ವಿರಾಮ ಚಿನ್ಹೆ**
2. '……' – **ಒಂಟಿ ಉದ್ಧರಣ ಚಿನ್ಹೆ**
3. (…….) – **ಆವರಣ ಚಿನ್ಹೆ**
4. "……." : **ಜೋಡಿ ಉದ್ಧರಣ ಚಿನ್ಹೆ**
5. ! – **ಭಾವಸೂಚಕ ಚಿನ್ಹೆ**

## ಪದ್ಯ ಪಾಠ 8 : ಕಿತ್ತೂರ ಕೇಸರಿ

**ಅ. ಬಿಟ್ಟ ಸ್ಥಳ ತುಂಬಿರಿ.**

1. ಅನ್ನಕ್ಕೆ ಬಂದಿರುವ ____________ಮನ್ನಿಸದೆ. **ಉ: ಕುನ್ನಿಗಳ**
2. ಹೋದರೀ __________ ಪರಕೀಯರಾ ವಶಕೆ! **ಉ: ಸಿರಿನಾಡು**
3. ಕರಿನೆಲದ ಗರಿಮೆಯನು ತೋರಿಸಲು __________ **ಉ: ಬಿಳಿಯರಿಗೆ**
4. ಮಮ್ಮಲನೆ ಮರುಗಿದಳು________ಕೊರಗಿದಳು. **ಉ: ಮನನೊಂದು**

**ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.**

1. ಚರಿತ್ರೆ : **ಭಾರತ ದೇಶ ಚರಿತ್ರೆ ಅನುಪಮವಾದುದು.**
2. ಜಯಮಾಲೆ : **ನಮ್ಮ ಶಾಲಾ ಮಕ್ಕಳು ಕಬ್ಬಡ್ಡಿ ಆಟದಲ್ಲಿ ಗೆದ್ದಾಗ ನಾವು ಜಯಮಾಲೆ ಹಾಕುವೆವು.**
3. ಋಣ : **ನಾವು ಅಪ್ಪ, ಅಮ್ಮರ ಋಣ ತೀರಿಸಲು ಸಾಧ್ಯವಿಲ್ಲ.**

**ಇ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ. ಚೆನ್ನಮ್ಮ ಏನೆಂದು ಕನವರಿಸಿ ಹಲ್ಲು ಕಡಿದಳು? **ಉ : ಹೇದರೀ ಸಿರಿನಾಡು ಪರಕೀಯರ ವಶಕೆಂದು**

ಆ. ನಮ್ಮ ಅನ್ನವನ್ನು ಉಂಡು ಕೊಬ್ಬಿರುವವರು ಯಾರು? **ಉ : ಕುನ್ನಿಗಳ**

ಇ. ಚೆನ್ನಮ್ಮ ಸೈನಿಕರನ್ನು ಕುರಿತು ಏನೆಂದು ಹೇಳಿದಳು?

**ಉ : ಗುಡುಗಿದಳು ಸಿಡಿಲಂತೆ ಸಿಂಹದಾ ಧ್ವನಿಯಂತೆ ಏಳಿರೈ ಕೆಚ್ಚೆದೆಯ ಕಲಿಗಳೇ ನೀವು!**

ಈ. ಯಾರ ಕೃಪೆಯಿಂದ ಸೈನ್ಯವನ್ನು ಕಟ್ಟಲಾಯಿತು? **ಉ : ರಾಜ ಗುರು ಕೃಪೆಯಿಂದ**

ಉ. ಮರುಜನ್ಮ ನೀಡೆಂದು ಚೆನ್ನಮ್ಮ ಯಾರಲ್ಲಿ, ಯಾಕೆ ಕೇಳಿದಳು?

**ಉ : ನಿನ್ನ ಋಣ ತೀರಿಸಲು ನನಗಾಗಲಿಲ್ಲಮ್ಮ! ಈ ಒಂದೆ ಜನ್ಮದಲಿ ಕರುನಾಡ ಒಡತಿಯಲ್ಲಿ ಕೇಳಿದಳು.**

**ಈ. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.**

1. ರಾಣಿ ಚೆನ್ನಮ್ಮ ಹಲ್ಲು ಕಡಿದದ್ದು ಯಾಕೆ?

**ಉ : ಮಲ್ಲಸಜ್ಜನ ಮನಕೆ ನೋವಾಗದಿರಬಹುದೆ? ಹೋದರೀ ಸಿರಿನಾಡು ಪರಕೀಯರಾ ವಶಕೆ! ಮಂಚಕ್ಕೆ ಒರಗಿರುವ ಕಿರಿಯರಸಿ ಚೆನ್ನಮ್ಮ ಕನವರಿಸಿ ಕಟಕಟನೆ ಹಲ್ ಕಡಿದಳಾಕೆ.**

2. ಕೆಚ್ಚದೆಯ ಕಲಿಗಳಿಗೆ ಚೆನ್ನಮ್ಮ ಏನೆಂದು ಹೇಳಿದಳು?

**ಉ : ಗುಡುಗಿದಳು ಸಿಡಿಲಂತೆ ಸಿಂಹದಾ ಧ್ವನಿಯಂತೆ ಏಳಿರೈ ಕೆಚ್ಚೆದೆಯ ಕಲಿಗಳೇ ನೀವು! ಕರಿನೆಲದ ಗರಿಮೆಯನು ತೋರಿಸಲು ಬಿಳಿಯರಿಗೆ ಛಲ ತೊಟ್ಟು ಹುಲಿಯಂತೆ ನುಗ್ಗೋಣ ನಾವು ॥**

3. ಚೆನ್ನಮ್ಮನಿಗೆ ನೋವಾಗಲು ಕಾರಣವೇನು?

**ಉ: ತನ್ನಾತ್ಮ ಛಲದಿಂದ ಧರಿಸಿದಳು ಜಯಮಾಲೆ , ಸೋಲಾಯ್ತು ಮರುಕ್ಷಣವೆ ದುರ್ಮತಿಯರಿಂದ ಮಮ್ಮಲನೆ ಮರುಗಿದಳು ಮನನೊಂದು ಕೊರಗಿದಳು ತಾಯ್ ನೆಲದ ರಕ್ಷಣೆಯು ಕೈ ಮೀರಿತೆಂದು**

4. ಕಿತ್ತೂರ ಕೇಸರಿ ಕಣ್ಮುಚ್ಚಿ ಏನೆಂದು ಬೇಡಿಕೊಂಡಳು?

**ಉ : ನಿನ್ನ ಋಣ ತೀರಿಸಲು ನನಗಾಗಲಿಲ್ಲಮ್ಮ! ಈ ಒಂದೆ ಜನ್ಮದಲಿ ಕರುನಾಡ ಒಡತಿ ! 'ಮರುಜನ್ಮ ನೀಡೆನಗೆ ಹೆಣ್ಣಾಗಿ ಈ ನೆಲದಿ' ಕಣ್ಮುಚ್ಚಿ ಬೇಡಿದಳು ಕಿತ್ತೂರ ಕೇಸರಿ**

**ಭಾಷಾ ಆಟಗಳು ಅ. ಇಲ್ಲಿ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಒಂದು ಚೌಕದಲ್ಲಿ ಮಿಶ್ರಗೊಳಿಸಿ ನೀಡಿದೆ.**

ಜಾಣರಾದ ನೀವು ಅವುಗಳನ್ನು ಪ್ರತ್ಯೇಕಿಸಿ ಬರೆಯಿರಿ.

ದಿವಾನ, ಸೈಕಲ್, ಅನಾನಸು, ವಜಾ, ಜರೂರು, ಬೆಲ್ಲ, ಸರದಾರ, ಸಿನಿಮಾ, ಖಾನಾವಳಿ, ನೀರು, ಚೂಡ; ಶಿಫಾರಸ್ಸು ಮೇಜು, ಹುಲ್ಲು, ಪಗಾರ; ಸಾಬೂನು, ಎಕರೆ; ಸರಕಾರ, ಹೊಲ, ಕಛೇರಿ,ಜಾನುವಾರು, ಆಟ, ಲಾವಣಿ, ಬಟಾಟೆ, ಅಮಲ್ದಾರ್,

1. ಕಾಲಗಳು ಯಾವುವು? **ಉ : ಬೇಸಿಗೆ, ಮಳೆ, ಚಳಿಗಾಲಗಳು.**
2. ಭೂಮಿಯ ಮೇಲೆ ಕಾಲಗಳು ಹೇಗೆ ಉಂಟಾಗುತ್ತವೆ? **ಉ : ವಾತಾವರಣದಲ್ಲಿ ಆಗುವ ಬದಲಾವಣೆಗಳಿಂದ**
3. ಮಳೆ ಬಾರದಿದ್ದರೆ ಏನಾಗಬಹುದು? **ಉ : ಬೆಳೆಗಳು ಬೆಳೆಯದೇ ಬರಗಾಲ ಉಂಟಾಗುತ್ತದೆ.**
4. ಚಳಿಗಾಲ ಅಗತ್ಯವಿದೆಯೆ? **ಉ : ಎಲೆಗಳು ಉದುರಿ ಚಿಗುರಲು.**
5. ಈಗ ಬಿಸಿಲಿನ ಪ್ರಮಾಣ ಹೆಚ್ಚಾಗಿದೆ ಕಾರಣವೇನು? **ಉ : ಕಾಡನ್ನು ನಾಶಮಾಡಿ ನಾಡನ್ನು ಕಟ್ಟುವುದರಿಂದ.**
6. ಕಾಲಗಳೇ ಇಲ್ಲದಿದ್ದರೆ ಏನಾಗುತ್ತಿತ್ತು? **ಉ : ಪ್ರಕೃತಿಯಲ್ಲಿ ಬದಲಾವಣೆಗಳು ಆಗುತ್ತಿರಲಿಲ್ಲ.**

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ನಮ್ಮ ತಂದೆ–ತಾಯಿ ಬಂಧು ಬಳಗ ಯಾರು? **ಉ: ಸತ್ಯವೇ ನಮ್ಮ ತಂದೆ ತಾಯಿ ಸತ್ಯವೇ ನಮ್ಮ ಬಂಧು ಬಳಗ**

2. ಈ ಕತೆಯಲ್ಲಿ ಬರುವ ದೆವ್ವದ ಹೆಸರೇನು? **ಉ : ದುಬಾಕು ದೆವ್ವ**

3. ದೆವ್ವ ಹೇಳುತ್ತಿದ್ದ ಮಂತ್ರ ಯಾವುದು? **ಉ: ಸುಂಯ್ ಟುಪಕ್**

4. ಪುಟ್ಟಲಕ್ಷ್ಮಿ ದುಬಾಕು ದೆವ್ವಕ್ಕೆ ಏನೆಂದು ಶಾಪ ಹಾಕಿದಳು?

**ಉ : ಮಕ್ಕಳ ತಿಂಡಿಯನ್ನು ಕದ್ದು ತಿಂದ ನೀನು, ಇನ್ನು ಮೇಲೆ ಯಂತ್ರವಾಗಿ ಬದಲಾಗು ಎಂದು ಶಾಪ ಕೊಟ್ಟಳು.**

5. ದುಬಾಕು ದೆವ್ವ ಯಾವ ಯಂತ್ರವಾಗಿ ಬದಲಾಯಿತು? **ಉ : ಜೆಸಿಬಿ**

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಮೊದಲನೆಯ ಪತ್ರದಲ್ಲಿ ಭಾಷಣಕಾರರು ಯಾವ 'ಸಮಸ್ಯೆಯನ್ನು ಹೇಳಿಕೊಳ್ಳುತ್ತಾರೆ?

**ಉ : ಪ್ರವಾಸದ ಸಮಸ್ಯೆ. ರೈಲು ಟಿಕೇಟ್ ಸಮಸ್ಯೆ.**

2. ಭಾಷಣಕಾರರ ಭಾಷಣದ ವಿಷಯವೇನು? **ಉ : ನಮ್ಮ ಆರ್ಥಿಕ ದುಃಸ್ಥಿತಿ**

3. ಭಾಷಣಕಾರರಿಗೆ ಪತ್ರ ಬರೆದವರು ಯಾರು? **ಉ : ಕಾರ್ಯದರ್ಶಿ , ನಾಡಹಬ್ಬ ಸಮಿತಿ.**

4. ಭಾಷಣಕಾರರ ಭಾಷಣ ರದ್ದು ಪಡಿಸಲು ಕಾರಣವೇನು? **ನಮ್ಮ ಆರ್ಥಿಕ ದುಃಸ್ಥಿತಿ**

5. ಭಾಷಣಕಾರರ ಸಮಸ್ಯೆಗೆ ಕಾರ್ಯದರ್ಶಿಗಳ ಕೊನೆಯ ಉತ್ತರವೇನು?

**ಉ : ತಾವು ದಯವಿಟ್ಟು ಹೊರಡಬೇಡಿ; ತಮ್ಮ ಭಾಷಣದ ಕಾರ್ಯಕ್ರಮವನ್ನು ರದುಗ್ದೊಳಿಸಲಾಗಿದೆ. ಇದಕ್ಕೆ ಕಾರಣ " ನಮ್ಮ ಆರ್ಥಿಕ ದುಃಸ್ಥಿತಿ" ತಮ್ಮ ಭಾಷಣಾಮೃತವನ್ನು ಸವಿಯುವ ಪುಣ್ಯವಿಲ್ಲದ ನಿರ್ಭಾಗ್ಯ ಕಾರ್ಯದರ್ಶಿ. ನಾಡಹಬ್ಬ ಸಮಿತಿ.**

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಇರುವೆ ತಿಂಡಿಯನ್ನು ಹೇಗೆ ಹುಡುಕುತ್ತದೆ ? **ಉ : ಮೂಸುತ ಹುಡುಕುತ್ತದೆ.**

2. ಇರುವೆ ಏನನ್ನು ಕದಿಯುತ್ತದೆ ? ಉ : **ಗುಟ್ಟಿನ ತಿಂಡಿಯನು**

3. ಯಾವ ಯಾವ ಬಣ್ಣದ ಇರುವೆಗಳಿರುತ್ತವೆ ? **ಉ : ಕೆಂಪು, ಕಪ್ಪು, ಕಂದು**

4. ಗುಂಪಿನ ಇರುವೆ ಏನು ಹೊತ್ತಿರುತ್ತದೆ ? **ಉ : ತತ್ತಿಯನ್ನು**

5. ದೊಡ್ಡತಲೆಯ ಇರುವೆ ಯಾವುದು? **ಉ : ಯಜಮಾನ ಇರುವೆ.**

## ಪದಗಳ ಅರ್ಥ

### 1. ದೊಡ್ಡವರ ದಾರಿ

1. ರಾಷ್ಟ್ರಪತಿ–ರಾಷ್ಟ್ರಾಧ್ಯಕ್ಷ, ರಾಷ್ಟ್ರದ ಪ್ರಥಮ ಪ್ರಜೆ.
2. ಉನ್ನತ–ಎತ್ತರವಾದ, ಮೇಲಾದ.
3. ಹತ್ತಿಕ್ಕು–ಅಡಗಿಸು, ಧಮನಮಾಡು.
4. ಚೆಲ್ಲಾಪಿಲ್ಲಿ–ಅಸ್ತವ್ಯಸ್ತ, ಚೆದುರು.
5. ಅನುಗುಣ–ಅನುಸಾರ, ಹೊಂದಿಕೊಂಡು.
6. ಆಕರ–ಮೂಲ ಆಧಾರ.
7. ಮನೋಭಾವ–ಮನಸ್ಸಿನಭಾವನೆ.
8. ದೌರ್ಬಲ್ಯ– ಬಲಹೀನತೆ, ಚಾಪಲ್ಯ.
9. ಭಂಗ–ಸೋಲು, ವೈಫಲ್ಯ.
10. ವರ್ತನೆ– ನಡತೆ, ರೀತಿ.
11. ಆದೇಶ–ಆಜ್ಞೆ, ಅಪ್ಪಣೆ.
12. ಸದೃಶ–ಹೋಲುವ, ಸಾಟಿಯಾದ.
13. ಸಂಯಮ–ಹತೋಟಿ, ನಿಯಂತ್ರಣ.
14. ಅಪರಾಧಿ– ತಪ್ಪುಮಾಡಿದವನು.
15. ಭಂಡಾರ–ಬೊಕ್ಕಸ, ಖಜಾನೆ.
16. ಜೋಪಾನ–ರಕ್ಷಣೆ, ಜತನ.
17. ಪ್ರಗತಿ–ಮುನ್ನಡೆ, ಅಭಿವೃದ್ಧಿ.
18. ರೋಚಕ–ಕುತೂಹಲಕಾರಿ, ಸೋಜಿಗದಾಯಕ.
19. ಪ್ರವೇಶದ್ವಾರ–ಒಳಹೋಗುವ ಮುಖ್ಯ ಬಾಗಿಲು.
20. ನೀಟಾಗಿ–ಅಂದವಾಗಿ, ಸೊಗಸಾಗಿ.

### 2. ಗಂಧರ್ವ ಸೇನ

21. ಒಡ್ಡೋಲಗ–ರಾಜಸಭೆ, ದರ್ಬಾರು.
22. ರೋದನ–ಅಳುವಿಕೆ, ಪ್ರಲಾಪ.
23. ಚುಂಬನ– ಮುತ್ತು.
24. ಉದ್ಗರಿಸು–ಹೇಳು, ಹೊರಗೆಡಹು.
25. ಪರಿಸಮಾಪ್ತಿ–ಮುಕ್ತಾಯ, ಕೊನೆ.
26. ಶೋಕ–ಅಳಲು, ದುಃಖ.
27. ಗದ್ಗದ ಕಂಠ–ನಿಂತು ನಿಂತು ಬರುವ ಅಸ್ಪಷ್ಟವಾದ ಮಾತು, ಬಿಗಿದ ಕಂಠ.
28. ಅಂತಃಪುರ–ರಾಣಿವಾಸ.
29. ನಿಟ್ಟುಸಿರು–ದೀರ್ಘವಾಗಿ ಬಿಡುವ ಉಸಿರು, ನಿಡಿದಾದ ಶ್ವಾಸ.
30. ಬಡಪಾಯಿ–ಅಶಕ್ತ, ದುರ್ಬಲ, (ದರಿದ್ರ). ತೀರಿಕೊಳ್ಳು–ಗತಿಸು, ಮರಣ ಹೊಂದು.
31. ಮಾರ್ನುಡಿ–ಪ್ರತಿಯಾಗಿ ಮಾತನಾಡು, ಮಾರುತ್ತರ ಕೊಡು.
32. ಪತ್ತೆ–ಗುರುತು, ಸುಳಿವು, ವಿಳಾಸ.
33. ಬೊಬ್ಬಿಡು–ಕೂಗು, ಅರಚು, ಗಟ್ಟಿಯಾಗಿ ಹೇಳು.
34. ನಿಜಾಂಶ–ಸತ್ಯ, ದಿಟ.
35. ಪಕ್ಕೆಲುಬು– ಇಬ್ಬದಿಯ ಎಲುಬುಗಳು.

### 3. ಕೃಷ್ಣ–ಸುಧಾಮ

36. ಕಂಗಾಲಾಗು – ಕಂಗೆಡು, ತಬ್ಬಿಬ್ಬಾಗು.
37. ವಿಧೇಯತೆ – ನಮ್ರತೆ, ಅನುಸರಿಸುವ ಗುಣ. ಪಾಂಡಿತ್ಯ – ವಿದ್ವತ್ತು.
38. ಸ್ನೇಹ–ಗೆಳೆತನ, ಮಿತ್ರತ್ವ.
39. ಸಂಕೋಚ – ಕುಗ್ಗುವುದು, ಮುದುಡುವುದು.
40. ಕೃಪೆ – ದಯೆ, ಕರುಣೆ.
41. ಆಶ್ಚರ್ಯ – ವಿಸ್ಮಯ, ಬೆರಗು.
42. ಆಭರಣ– ಒಡವೆ.
43. ಇಂಗಿತ – ಆಶಯ.
44. **ದಾಯಾದಿ :** ಅಣ್ಣತಮ್ಮಂದಿರ ಮಕ್ಕಳು.
45. **ಶತಪದಿಸು :** ಹಿಂದಕ್ಕೆ ಮುಂದಕ್ಕೆ ನಡೆದಾಡು.
46. **ರಾಜಧರ್ಮ :** ಅರಸನು ಪ್ರಜೆಗಳ ಕ್ಷೇಮಕ್ಕಾಗಿ ಪಾಲಿಸಬೇಕಾದ ನೀತಿ.
47. **ಕಾಲಕೂಡಿಬರು :** ಸಮಯ, ಸಂದರ್ಭ ಒದಗಿ ಬರುವುದು.
48. **ಗುರುಕುಲ :** ಹಿಂದಿನ ಕಾಲದಲ್ಲಿ ಗುರುಗಳ ಮನೆಯೆ ಪಾಠಶಾಲೆ ಆಗಿರುತ್ತಿತ್ತು.

### 4. ಡಾ. ರಾಜಕುಮಾರ್

49. ಅವಿಭಾಜ್ಯ–ಬೇರ್ಪಡಿಸಲಾಗದ,
50. ವರ್ಷಧಾರೆ–ಮಳೆ,
51. ಕಂಗೆಡು–ದಿಕ್ಕುತೋಚದಂತಾಗು,
52. ಸೆಳೆತ–ಆಕರ್ಷಣೆ,
53. ವಾತ್ಸಲ್ಯ–ಪ್ರೀತಿ,
54. ಹಸನು–ಸಮೃದ್ಧ,
55. ಆಡುಂಬೊಲ–ಆಟದ ಬಯಲು,
56. ಇಹಲೋಕ–ಭೂಮಿಯ ಮೇಲಿನ ಬದುಕು,
57. ತ್ಯಜಿಸು–ಬಿಟ್ಟುಬಿಡು,
58. ಹೊಣೆಗಾರಿಕೆ–ಜವಾಬ್ದಾರಿ,
59. ಹೆಗಲೆಣೆ–ನೆರವು; ಸಹಾಯ,
60. ಮಜಲು–ಹಂತ,
61. ಸ್ಮರಣಾರ್ಹ–ನೆನಪಿಟ್ಟುಕೊಳ್ಳಲು ಯೋಗ್ಯವಾದ,
62. ಅಗಣಿತ–ಲೆಕ್ಕವಿಲ್ಲದಷ್ಟು.

### 1. ಬೇಸಿಗೆ

63. ಸಜಾ– ಶಿಕ್ಷೆ
64. ಮಹಿಮೆ – ಹಿರಿಮೆ, ಮಹತ್ವ.
65. ರವಿ – ಭಾನು, ಸೂರ್ಯ, ನೇಸರು.
66. ತಾಪ– ಬಿಸಿ, ಶಾಖ.
67. ಹಳಿ – ದೂಷಿಸು, ನಿಂದಿಸು.
68. ಇಳೆ – ಭೂಮಿ, ಧರೆ.
69. ಪೋಷಕ – ಸಲಹುವಾತ, ಪಾಲಕ.
    ಅನಿವಾರ್ಯ– ಅತ್ಯಗತ್ಯ.
70. ಹೊಗಳು – ಕೊಂಡಾಡು, ಬಣ್ಣಿಸು.
71. ತೆಗಳು – ಹೀಯಾಳಿಸು, ನಿಂದಿಸು.
    ಮಿಡಿ – ಹೀಚು, ಕಸುಗಾಯಿ.
72. ಊಡು – ಉಣಿಸು, ತಿನ್ನಿಸು.
73. ಕರ್ತವ್ಯ – ಕೆಲಸ, ಜವಾಬ್ದಾರಿ.
74. ಬಿರು – ರಭಸ, ಬಿರುಸು.
75. ಸಂಭ್ರಮ – ಉತ್ಸಾಹ, ಸಡಗರ.
76. ಧನ್ಯತೆ –ಸಂತೃಪ್ತಿ.
    ವರುಣ– ಮಳೆದೇವತೆ
77. ವರ್ಣ–ಬಣ್ಣ, ಅಕ್ಷರ.
    ಕೃತಜ್ಞತೆ–ಉಪಕಾರ ಸ್ಮರಣೆ ಇರುವ
78. ಕೃತಘ್ನತೆ– ಉಪಕಾರ ಸ್ಮರಣೆ ಇಲ್ಲದ.
    ವಂದಿಸು–ನಮಸ್ಕರಿಸು,
79. ಹೊಂದಿಸು– ಜೋಡಿಸು
    ಅರ್ತಿ–ಪ್ರೀತಿ
80. ಅರ್ಥಿ– ಬೇಡುವವರು
    ಪಾವನ– ಪವಿತ್ರ
81. ಪವನ– ಗಾಳಿ
    ಎಲರು–ಗಾಳಿ
82. ಎಲ್ಲರೂ–ಸರ್ವರು
    ಆಡು–ಆಟ, ಮೇಕೆ
83. ಹಾಡು– ಗಾಯನ
84. ಆಗಸ– ಆಕಾಶ, ಗಗನ.
85. ಇಷ್ಟ–ಇಚ್ಛೆ, ಮೆಚ್ಚುಗೆ.
86. ರೆಕ್ಕೆ–ಹಕ್ಕಿಗಳ ಪುಕ್ಕ, ಗರಿ.
87. ಒಡಲು–ಶರೀರ, ಹೊಟ್ಟೆ.
88. ಸಾಗು–ಚಲಿಸು, ಮುಂದೆ ಹೋಗು.
89. ಮಡಿಲು–ಉಡಿ.
90. ಧರೆ–ನೆಲ, ಭೂಮಿ.
91. ಹೆಬ್ಬಂಡೆ– ದೊಡ್ಡದಾದ ಬಂಡೆ, ವಿಸ್ತಾರವಾದ ಕಲ್ಲು.
92. ಬರ–ಬರಗಾಲ, ಕ್ಷಾಮ.
93. ಅಳಿ–ಸಾಯು, ನಾಶಹೊಂದು.
    ಗತಿ–ಸ್ಥಿತಿ, ದಾರಿ.
94. ಬಯಲು–ಅಂಗಳ, ಮೈದಾನ.
95. ಉಳಿಸು–ರಕ್ಷಿಸು, ಕಾಪಾಡು.
96. ನೆಡು–ನಾಟು, ಊರು
97. ಬರಡು – ಸತ್ವಹೀನ;

### 3. ನೀ ಹೋದ ಮರುದಿನ

98. ಕೊತ್ತಿಗಳು – ಬೆಕ್ಕುಗಳು;
99. ಟಾರ – ಡಾಂಬರು.

### 4. ಮಗು & ಹಣ್ಣುಗಳು

100. ಗಿರಿವಿಯಂಗಡಿ – ವಸ್ತುಗಳನ್ನು ಅಡವಿಟ್ಟುಕೊಂಡು ಹಣ ನೀಡುವ ಅಂಗಡಿ;
101. ಗುಜರಿ – ಹಳೆಯ ವಸ್ತುಗಳನ್ನು ಮಾರುವ ಸ್ಥಳ;
102. ಪಕ್ವತನ – ಮಾಗಿದ;
103. ಕೊಬ್ಬು – ರಸಭರಿತ;
104. ಕಮರು – ಕಂದು;
105. ಖನಿ – ಗಣಿ, ಆಕರ;
106. ದಕ್ಕು – ದೊರಕು.

## ದ್ವಿತಿಯ ಸೆಮಿಸ್ಟರ್

### 5. ಧನ್ಯವಾದ ಹೇಳಿದ ಕೊಕ್ಕರೆ

1. ರಸಮೂಲಿಕೆ–ಗಿಡಮೂಲಿಕೆ, ಔಷಧಿ;
2. ಕೊಳ–ಸರೋವರ;
3. ನೆರವು–ಸಹಾಯ;
4. ವೃದ್ಧ–ವಯಸ್ಸಾದ;
5. ಕ್ಷಾಮ–ಬರಗಾಲ;
6. ಆದೇಶ–ಆಜ್ಞೆ;
7. ವರಹ–ಚಿನ್ನದ ನಾಣ್ಯ;
8. ನೇಯುವುದು–ತಯಾರಿಸು, ಹೆಣೆಯುವುದು;
9. ಕರುನಾಳು–ಕನಿಕರವುಳ್ಳವನು;
10. ಪೀತಾಂಬರ–ರೇಷ್ಮೆಬಟ್ಟೆ;

### 6. ಮೆರವಣಿಗೆ

11. ತಡ–ನಿಧಾನ, ವಿಳಂಬ.
12. ಸಲಹೆ– ಅಭಿಪ್ರಾಯ, ಆಲೋಚನೆ.
13. ಸೂಚನೆ – ತಿಳಿಸುವಿಕೆ, ಸ್ರಚಿಸುವಿಕೆ.

14. ಕೋರು–ಕೇಳಿಕೊಳ್ಳು, ಬೇಡು.
15. ಸಿದ್ಧತೆ–ತಯಾರು, ಸಜ್ಜು.
16. ಪಟ್ಟಿ–ಯಾದಿ, ವಿವರಣೆಯ ಬರೆಹ.
17. ನಿರ್ವಹಿಸು–ನಿಭಾಯಿಸು, ಪೂರೈಸು.
18. ಅಲಂಕಾರ–ಸಿಂಗಾರ, ಸೊಗಸು.
19. ಹಂಚಿಕೆ–ಹಂಚುವಿಕೆ, ಪಾಲು ಮಾಡುವಿಕೆ.
20. ಬಡಿ–ಬಾರಿಸು, ಪೆಟ್ಟು ಹಾಕು.
21. ಹೆಜ್ಜೆ ಹಾಕು–ಚಲಿಸು,
22. ನಡೆ. ಅನಿಸಿಕೆ– ಅಭಿಪ್ರಾಯ, ಅಭಿಮತ.
23. ಭಂಗಿ–ಹಾವಭಾವ, ವಿನ್ಯಾಸ.
24. ಬೀಗು– ಉಬ್ಬು, ಹೆಮ್ಮೆತಾಳು.
25. ಭವ್ಯ–ವಿಜೃಂಭಣೆ, ವೈಭವ

## 7. ಯಾಣ ಕುರಿತೊಂದು ಪತ್ರ

26. ಸಂದೇಶ– ಸುದ್ದಿ; ನಿರೂಪ.
27. ವಿನಿಮಯ–ಒಂದಕ್ಕೆ ಬದಲಾಗಿ ಮತ್ತೊಂದನ್ನು ಕೊಡುವಿಕೆ; ಅದಲು ಬದಲು ಮಾಡಿಕೊಳ್ಳು.
28. ಚೂಟಿ–ಚುರುಕು; ಲವಲವಿಕೆ.
29. ವಿಶೇಷ– ಪ್ರತ್ಯೇಕವಾದ; ವಿಶಿಷ್ಟವಾದ.
30. ಗಗನಚುಂಬಿ–ಆಕಾಶವನ್ನು ಮುಟ್ಟುವಂತಹದು; ಬಹಳ ಎತ್ತರವಾದುದು.
31. ಹೆಬ್ಬಂಡೆ–ದೊಡ್ಡದಾದ ಕಲ್ಲು.
32. ಇಕ್ಕಟ್ಟು–ಸಂದಿಗ್ಧ; ಕಿರಿದಾದ.
33. ಶಿಖರ– ಮರ, ಬೆಟ್ಟಗಳ ತುದಿ; ದೇವಾಲಯಗಳ ಗೋಪುರ.
34. ಉತ್ಪತ್ತಿ– ಸೃಷ್ಟಿ; ಉಂಟಾಗು; ಹುಟ್ಟು

## 8. ಕರ್ನಾಟಕ ಏಕೀಕರಣ

35. ಉದಯ–ಹುಟ್ಟು, ಮೂಡು.
36. ಆಕಾಶವಾಣಿ–ಆಕಾಶದಲ್ಲಿ ಕೇಳುವ ಧ್ವನಿ, ರೇಡಿಯೋ, ಬಾನುಲಿ.
37. ಪ್ರಸ್ತುತಪಡಿಸು–ಪ್ರಕಟಿಸು, ಸಾದರಪಡಿಸು.
38. ಆಲಿಸು–ಕೇಳು.
39. ಹೊರತುಪಡಿಸಿ–ಬಿಟ್ಟು.
40. ಕುತೂಹಲ–ಅಚ್ಚರಿ, ವಿಸ್ಮಯ.
41. ಸಂಸ್ಥಾನ–ರಾಜ್ಯ, ದೇಶದ ಒಂದು ಭಾಗ.
42. ಪರಕೀಯ–ಬೇರೆಯ, ಹೊರಗಿನ, ಅನ್ಯ.
43. ಅಸಹನೀಯ–ಸಹಿಸಲು ಸಾಧ್ಯವಿಲ್ಲದ, ತಡೆಯಲಾಗದ.
44. ಅಸ್ತಿತ್ವ–ಇರುವಿಕೆ.
45. ಅಗ್ರಗಣ್ಯ–ಮೊಟ್ಟಮೊದಲಿನ, ಸರ್ವಶ್ರೇಷ್ಠ.
46. ಪ್ರೇರಣೆ–ಪ್ರಚೋದನೆ, ಮುಂದಕ್ಕೆ ಹೋಗುವಚಿತೆ ಉತ್ತೇಜಿಸುವಿಕೆ.
47. ವಿಭಜನೆ– ವಿಂಗಡಣೆ, ಬೇರ್ಪಡಿಸುವಿಕೆ.
48. ಸಮಾನ ಮನಸ್ಕ–ಒಂದೇ ಬಗೆಯಲ್ಲಿ ಯೋಚನೆ ಮಾಡುವವನು, ತನ್ನಂತೆಯೇ ಅಭಿಪ್ರಾಯ ಉಳ್ಳವನು.
49. ಕಾರ್ಯಪ್ರವರ್ತ–ಕೆಲಸ ಮಾಡಲು ಮೊದಲಾಗು.
50. ಧ್ಯೇಯೋದ್ದೇಶ–ಗುರಿ.
51. ನಿಘಂಟು–ಶಬ್ದಕೋಶ, ಶಬ್ದಾರ್ಥ ಸಂಗ್ರಹ.
52. ನೆಲೆಕಲ್ಪಿಸು– ವೇದಿಕೆ ಒದಗಿಸು, ಅವಕಾಶ ಮಾಡಿಕೊಡು.
53. ಆಯೋಜಿಸು–ಏರ್ಪಾಡುಮಾಡು, ವ್ಯವಸ್ಥೆಗೊಳಿಸು.
54. ಆಂದೋಲನ–ಚಳುವಳಿ, ಕ್ರಾಂತಿ.
55. ವ್ಯಾಪ್ತಿ–ವಿಸ್ತಾರ, ಮಿತಿ.
56. ಎಡವಟ್ಟು–ರೂಢಿಗೆ ವಿರೋಧವಾದುದು, ಉಚಿತವಲ್ಲದ್ದು, ಕ್ರಮತಪ್ಪಿದ್ದು.
57. ಅಖಂಡ–ಅವಿಚ್ಛಿನ್ನ, ಪೂರ್ಣ

## 5. ಹೊಸಬಾಳು

58. ಚಾವಡಿ–ಜಗಲಿ, ಹಳ್ಳಿಯಲ್ಲಿ ಪಂಚಾಯತಿ ನಡೆಯುವ ಸ್ಥಳ.
59. ಕಾದಲ–ಇನಿಯ, ಪ್ರೀತಿಸುವಾತ.
60. ಹೊಂಚು–ಉಪಾಯ ಮಾಡು, ರಹಸ್ಯ ಕಾರ್ಯ ನಡೆಸು.
61. ಸರ್ವರೊಳು–ಎಲ್ಲರೊಳು.
62. ಕರುಣೆ–ಕನಿಕರ, ದಯೆ.
63. ಮೋಜು–ವಿನೋದ, ತಮಾಷೆಯಾಟ.
64. ಸಜ್ಜು–ಸಿದ್ಧತೆ, ತಯಾರಿ.
65. ಸೆಳಕು–ಚುರುಕು, ಚಟುವಟಿಕೆ.
66. ಬೆರಗು–ಆಶ್ಚರ್ಯ, ವಿಸ್ಮಯ, ಸೋಜಿಗ.
67. ಶೋಭೆ–ಸೊಗಸು, ಸೊಬಗು.
68. ಮಿಗಿಲು–ಶ್ರೇಷ್ಠವಾದುದು.
69. ಸಂಗ್ರಹಿಸು– ಒಟ್ಟುಮಾಡು, ಕೂಡಿಸು.
70. ಉಭಯ–ಎರಡು, ಜೋಡಿ.
71. ಅರಳೆ–ಹತ್ತಿ.

72. ಹುಲು–ಹುಲ್ಲು, ಲಘುವಾದ

## 6. ಗಂಗವ್ವ ತಾಯಿ

73. ದುಸ್ತರ– ಕಠಿಣ, ಕಷ್ಟಸಾಧ್ಯ.
74. ಕಣ– ಅತ್ಯಂತ ಸೂಕ್ಷ್ಮವಾದ ಅಂಶ.
75. ಪ್ರಾಣ– ಜೀವ, ಜೀವ ಉಳಿಯಲು ಕಾರಣವಾದ ಒಂದು ವಾಯು.
76. ನಭ–ಆಕಾಶ, ಗಗನ, ಅಂಬರ.
77. ಹೊಳೆ– ನದಿ, ಮಿನುಗು.
78. ಕುಣಿ–ಕುಳಿ, ಹೊಂಡ, ನರ್ತಿಸು.
79. ಕೊಳೆ–ಕಲ್ಮಷ, ಹೊಲಸು.
80. ಚಿಮ್ಮು–ಹಾರು, ಜಿಗಿ, ನೆಗೆ.
81. ತೊಳೆ–ನೀರಿನಿಂದ ಸ್ವಚ್ಛಗೊಳಿಸು.
82. ಮಾಯ–ಇದ್ದಕ್ಕಿದ್ದಂತೆ ಕಾಣೆಯಾಗುವುದು, ಮರೆಯಾಗಿರುವುದು.
83. ಹರಿ–ಓಡು, ಪ್ರವಹಿಸು, ಹೋಗು.
84. ತುಣುಕು– ಚೂರು, ತುಂಡು

## 7. ಹೃದಯ ವಚನಗಳು

85. ತಡವೆ–ಬಾರಿ, ಸಲ.
86. ಉಪಕರಿಸು–ಉಪಕಾರ ಮಾಡು, ನೆರವು ನೀಡು.
87. ಜರೆ– ನಿಂದಿಸು, ಬಯ್ಯು.
88. ಸ್ತುತಿ–ಹೊಗಳಿಕೆ.
89. ಒಲ್ಲೈಸು–ಮೆಚ್ಚಿಸು.
90. ಚಾಳಿ–ನಡವಳಿಕೆ, ವರ್ತನೆ.
91. ಹುಲ್ಲೆ–ಜಿಂಕೆ, ಚಿಗರೆ.
92. ಮೊರೆವ–ಗರ್ಜಿಸುವ,
93. ಕುಪ್ಪಳಿಸು–ಹಾರು, ಜಿಗಿಯು.
94. ಗಜ–ಆನೆ.
95. ಗುಟುರು–ಹೂಂಕರಿಸು, ಜೋರಾಗಿ ಧ್ವನಿ ಮಾಡು.
96. ನಂಜು–ವಿಷ.
97. ನಿರಾಳ–ಶಾಂತಿ, ನೆಮ್ಮದಿ.
98. ಹದನ–ರೀತಿ.
99. ಎನಿತು–ಎಷ್ಟು.
100.ಮಿಡಿತ–ಬಡಿತ, ಸ್ಪಂದನ.
101. ಬೆಸುಗೆ–ಹೊಂದಿಕೆ, ಜೋಡಣೆ.
102.ಸಾಧಿತ–ಸಾಧಿಸಿದ, ಸಿದ್ಧಿಯನ್ನು ಪಡೆದ.
103.ದಾತ–ಒಡೆಯ, ಸ್ವಾಮಿ

## 8. ಕಿತ್ತೂರ ಕೇಸರಿ

104.ದಿಟ್ಟಹೆಜ್ಜೆ–ಧೈರ್ಯದ ಹೆಜ್ಜೆ, ಸಾಹಸದ ನಡೆ.
105.ಚರಿತ್ರೆ–ಇತಿಹಾಸ.
106.ಕುನ್ನಿ–ನಾಯಿಮರಿ.
107.ಜನಜನಿತ–ಪ್ರಸಿದ್ಧವಾದ.
108.ಪರಕೀಯ–ವಿದೇಶಿಯ, ಅನ್ಯ.
109.ಕನವರಿಕೆ–ನಿದ್ದೆಯಲ್ಲಿ ಮಾತಾಡಿಕೊಳ್ಳುವಿಕೆ, ಒಂದೇ ವಿಷಯವನ್ನು ಮತ್ತೆ ಮತ್ತೆ ಯೋಚಿಸುವಿಕೆ.
110. ಕೆಚ್ಚೆದೆ–ಗಟ್ಟಿಯಾದಎದೆ, ಎದೆಗಾರಿಕೆ.
111. ರಣಚಂಡಿ–ಯುದ್ಧದೇವತೆ, ದುರ್ಗೆ.
112. ದುರ್ಮತಿ–ಕೆಟ್ಟ ಬುದ್ಧಿ, ದುಷ್ಟ ವ್ಯಕ್ತಿ.
113. ಮಮ್ಮಲ ಮರುಗು–ಅತಿಶಯವಾಗಿ ಮರುಗು, ವಿಶೇಷವಾಗಿ ದುಃಖಪಡು.
114. ಅರಿ–ತಿಳಿ.
115. ಸೆರೆಮನೆ–ಕಾರಾಗೃಹ, ಬಂದೀಖಾನೆ.
116. ಕಲಿ–ವೀರ, ಶೂರ.
**117**.. ಮರುಜನ್ಮ–ಪುನರ್ಜನ್ಮ.